ಅಪರಂಜಿ

ಜೂನ್ 2003

ಕಿಲಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಅಣ್ಣಾಸ್ವಾಮಿ ಮೊದಲಿಯಾರ್

ವಿಜಯ್

ಬಾಲು

ಹೆಚ್. ಗೋಪಾಲಕೃಷ್ಣ

ಆರತಿ

ವಿಜಯ ಸಚ್ಚಿದಾನಂದ

ಶೋಭಾ ಪ್ರಮೋದ್

ಭಕ್ತ

ಹೆಚ್. ಗೋಪಾಲಕೃಷ್ಣ

ಶಿವು

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500

Ph: 3345259
email : aparanji@hotmail.com
website : aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಜೂನ್ - 2003 ಸಂಚಿಕೆ - 9

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



ಪ್ರಕಾಶ್

ಕಾವೇರಿ: ಜಯಾ ಹೇಳಿಕೆಗೆ ಕೃಷ್ಣ ಮೌನದ ಉತ್ತರ
- ಸುದ್ದಿ

ಮೌನೇನ ಕಲಹಂ ಜಾಸ್ತಿ!!

★★★

ಕನ್ನಡ - ಕನ್ನಡ ನಿಘಂಟಿಗೆ ಇನ್ನು ಸಿ.ಡಿ. ರೂಪ
- ಸುದ್ದಿ

ಸಿ.ಡಿ. ಅನ್ನಕ್ಕೆ ಕನ್ನಡ??

★★★

ಕನ್ನಡ ಬಾವುಟಕ್ಕೆ ಅಗೌರವ: ಶ್ರೀರಾಮಪುರ ಉದ್ವಿಗ್ನ
- ಪತ್ರಿಕೆ

ರಾಮ, ರಾಮ!!

★★★

ಶಾಂತಿ ಕದಡುವವರ ವಿರುದ್ಧ ಕ್ರಮ
- ಸೋನಿಯಾ

ರಾಜಕಾರಣಿಗಳನ್ನು ಏನು ಮಾಡುತ್ತಾರಂತೆ?!

★★★

ಪ್ರವೇಶ ಪರೀಕ್ಷೆ ಯಥಾಸ್ಥಿತಿಗೆ ಸುಪ್ರೀಂ ಕೋರ್ಟ್ ಆದೇಶ
- ಸುದ್ದಿ

ಲಕ್ಷ್ಮಿ - ಸರಸ್ವತಿಯರ ದ್ವಂದ್ವಯುದ್ಧ!!

★★★

ಮಿನಿ ವಿಧಾನಸೌಧ: ಭರದಿಂದ ಸಾಗುತ್ತಿರುವ ಕಾಮಗಾರಿ
- ಪತ್ರಿಕೆ

ಅಲ್ಲಿ ಮಾಮೂಲುಗಳೂ 'ಮಿನಿ'??

★★★

ನ್ಯಾಯಬೆಲೆ ಅಂಗಡಿಯವರಿಗೆ ಅಧಿಕಾರಿಗಳಿಂದ ಕಿರುಕುಳ
- ಸುದ್ದಿ

ಅನ್ಯಾಯ

★★★

ಯುವ ಕಾಂಗ್ರೆಸ್ ಸಭೆಯಲ್ಲಿ ಮಾರಾಮಾರಿ
- ಪತ್ರಿಕೆ

ಶ್! ದೆಹಲಿಗೆ ಕೇಳಿಸೀತು!!

★★★

ಚಿತ್ರ ಕಿಡಿ

ತೀರ್ಥಯಾತ್ರೆಗೆ ನಾನು ಹೋಗುವುದಿಲ್ಲ
- ಲಲ್ಲೂ

ದೇವರುಗಳೆಲ್ಲ ಸಂತಸಪಟ್ಟರಂತೆ!!



ನಮ್ಮ ನಿಮ್ಮಲ್ಲಿ

ಜೆ.ಪಿ.ನಗರದ ಎನ್.ಆರ್.ವಿ. ರಾಯರ ಮನಸ್ಸಿಗೆ ಬೇಜಾರಾಗಿದೆಯಂತೆ. ಅವರ ಮಾತಿನಲ್ಲೇ ಹೇಳುವುದಾದರೆ ''ಯಾರನ್ನು ಕೇಳಿದರು, ಯಾರೊಂದಿಗೆ ಮಾತನಾಡಿದರೂ ಎಲ್ಲರೂ 'ಏನೋ ಬೋರು ಸ್ವಾಮಿ, ಬಿಸಿನೆಸ್ಸು ಡಲ್ಲು, ಹಣ ಬರುವುದು ಡಲ್ಲು, ಆರೋಗ್ಯ ಡಲ್ಲು, ಜೀವನವೇ ಡಲ್ಲು'' ಅನ್ನುತ್ತಾ ಇದಾರಂತೆ. ಈ ಎಲ್ಲ ಬೋರುಗಳ ನಡುವೆ 'ಅಪರಂಜಿ' ಓದಿ ಸ್ವಲ್ಪ ನಗೋಣ ಅಂದರೆ, ಪಾಪ ಅವರಿಗೆ ನಗು ಬರಿಸುವಂತಹ ಬರಹಗಳೇ ಕಾಣಿಸ್ತಿಲ್ಲವಂತೆ ಕಳೆದ ಮೂರು ತಿಂಗಳಿಂದ. ''ಈ ಜರ್ಜರಿತ ಜೀವನದಲ್ಲಿ ಪ್ಲೀಸ್ ನಮ್ಮನ್ನ ನಗಿಸಿ'' ಅಂತ ಕಳಕಳಿಯ ಮನವಿ ಕಳಿಸಿದ್ದಾರೆ ಈ ಮಹಾಶಯರು.

"The customer is always right" ಎಂಬ ಸೂಕ್ತಿಯ ಪ್ರಕಾರ ವೆಂಕಟೇಶರಾಯರ ಅಭಿಪ್ರಾಯಕ್ಕೆ ನೂರಕ್ಕೆ ನೂರರಷ್ಟು ನಮ್ಮ ಬೆಂಬಲ ಇದೆ. ಗಹಗಹಿಸುವ ನಗುವಲ್ಲದಿದ್ದರೂ ತುಟಿಯಂಚಿನ ಮಂದಹಾಸವನ್ನಾದರೂ ಮೂಡಿಸಲೇಬೇಕೆಂಬ ಹಠದಿಂದ ಈ ತಿಂಗಳ ಸಂಚಿಕೆಯನ್ನು ಹೊರತಂದಿದ್ದೇವೆ. ನಗು ಸಾಹಿತ್ಯದ ವಿವಿಧ ಪ್ರಕಾರಗಳನ್ನು ಉಣಬಡಿಸುವುದರ ಜೊತೆಗೆ, ಉದಯೋನ್ಮುಖ ವ್ಯಂಗ್ಯಚಿತ್ರಕಾರ ಸತೀಶ್ ಶೃಂಗೇರಿಯವರನ್ನು ಪುಸಲಾಯಿಸಿ ಸಂಚಿಕೆಯ ಬರಹಗಳಿಗೆ ಚಿತ್ರಗಳ ಶೃಂಗಾರವನ್ನು ಮಾಡಲಾಗಿದೆ. ನಮ್ಮ ಗರಡಿಯ ಪಳಗಿದ ಕೈಗಳಾದ ಅಣ್ಣಾಸ್ವಾಮಿ ಮೊದಲಿಯಾರರ ಲೇಖನ, ಗೋಪಾಲಕೃಷ್ಣರ ಕವನ ಇವು ನಮಗಂತೂ ಚೆನ್ನಾಗಿಯೇ ಇದೆ ಅನ್ನಿಸಿದ ಸರಕು. ಇವೆಲ್ಲದರ ಒಟ್ಟಾರೆ ಪರಿಣಾಮ ಓದುಗರ ಮನಸ್ಸಿಗೆ ಮುದ ತರುವಂತಾದರೆ ನಮ್ಮ ಯತ್ನ ಸಾರ್ಥಕ. ''ಇಷ್ಟೆಲ್ಲ ಮಾಡಿದರೂ ನಮ್ಮ ವೆಂಕಟೇಶರಾಯರು ನಗದಿದ್ದರೆ ಏನು ಮಾಡೋಣ, ಬೇಲೂರ್?'' ಅಂತ ನಮ್ಮ ಉಪಸಂಪಾದಕರನ್ನ ಕೇಳಿದೆ.

''ಬಳೇಪೇಟೆ ಗರಡೀಲಿ ಪೈಲ್ವಾನ್ ಪಿಳ್ಳಪ್ಪ ನನಗೆ ಚೆನ್ನಾಗಿ ಗುರುತು. ಹ್ಯಾಗೆ ನಗಲ್ಲ ನೋಡೋ ಬಿಡೇಣ'' ಅಂತ ಉತ್ತರ ಬಂತು.

ಮಾನ್ಯ ವೆಂಕಟೇಶರಾಯರಂತಹವರ ಫೀಡ್ ಬ್ಯಾಕ್ ನಮಗೆ ಅತಿ ಮುಖ್ಯ. ಎಲ್ಲ ಓದುಗರೂ ತಮ್ಮ ಮುಕ್ತ ಅನಿಸಿಕೆಗಳನ್ನ ನಮಗೆ ಕಳುಹಿಸಿದರೆ, ನಿಜಕ್ಕೂ ಅಪರಂಜಿ ಮೌಲ್ಯಯುತ ಸಂಚಿಕೆಯಾಗಬಲ್ಲುದು.

ನಮಸ್ಕಾರ

– ಶಿವಕುಮಾರ್


ಪತ್ತೇದಾರ ಮತ್ತು ಹಾವುರಾಣಿ

- ಅಣ್ಣಾಸ್ವಾಮಿ ಮೊದಲಿಯಾರ್

ಭಾನುವಾರ, ಮಟಮಟ ಮಧ್ಯಾಹ್ನ, ಬೇಸಿಗೆ ದಿನಗಳು, ನೆತ್ತಿಯ ಮೇಲೆ ಸೂರ್ಯ ಬೆಂಕಿಯ ಉಂಡೆಯಂತೆ ಉರಿಯುತ್ತಿರುವ ಸಮಯ. ಫ್ಯಾನಿನ ಗಾಳಿಯು ಬಿಸಿಯೇರಿ ಮೈ ಬೆಚ್ಚಗೆ ಮಾಡುತ್ತಿತ್ತು. ಹೊಟ್ಟೆ ತುಂಬ ಊಟ ಮಾಡಿ ಆರಾಮವಾಗಿ ಆರಾಮಕುರ್ಚಿಯಲ್ಲಿ ಒರಗಿದ್ದ ಪತ್ತೇದಾರ ರವಿಚಂದ್ರ. ಟಿ.ವಿ.ಯಲ್ಲಿ ವರ್ಲ್ಡ್‌ಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯ ಕ್ರಿಕೆಟ್‌ಟೀಮಿನ ದಾಂಡಿಗರು, ಇಂಡಿಯಾ ತಂಡದ ಬೌಲರುಗಳು ಹಾಕಿದ ಬಾಲುಗಳನ್ನು ಬೌಂಡರಿಗಳಿಗೆ, ಸಿಕ್ಸರ್‌ಗಳಿಗೆ ಚೆಚ್ಚುತ್ತಿರುವುದನ್ನು ಕಂಡು ಮತ್ತಷ್ಟು ಮೈ ಬಿಸಿಯೇರಿತ್ತು.

ಏರಿಯಾ ಕೌನ್ಸಿಲರ್ ಭಾರತದ ತಂಡ ಗೆದ್ದೇ ಗೆಲ್ಲುತ್ತೆ ಎಂಬ ಅಚಲ ವಿಶ್ವಾಸದಿಂದ ರಾತ್ರಿ ಮ್ಯಾಚ್ ಮುಗಿದ ನಂತರ ಮೆರವಣಿಗೆ, ಸಿಹಿ ಹಂಚುವಿಕೆ, ಪಟಾಕಿ ಸರಮಾಲೆ ಸಿಡಿತ ಇವೆಲ್ಲ ಮುಗಿಸಿ ಸಾರ್ವಜನಿಕ ಸಭೆಯಲ್ಲಿ ನಮ್ಮ ಕ್ರಿಕೆಟಿಗರನ್ನು ಅಭಿನಂದಿಸುವ ಕಾರ್ಯಕ್ರಮವಿತ್ತು. ಆ ಸಮಾರಂಭಕ್ಕೆ ಪತ್ತೇದಾರ ರವಿಚಂದ್ರ ಅಧ್ಯಕ್ಷತೆ ವಹಿಸಲಿದ್ದ. ಆಟ ಸಾಗುತ್ತಿರುವುದನ್ನು ನೋಡಿ ರವಿಚಂದ್ರ ಬೆವತುಹೋದ. ಇಂಡಿಯಾ ಸೋತರೆ ರಾತ್ರಿ ಸಮಾರಂಭವಿಲ್ಲ. ಅಂದಮೇಲೆ ಮಾರನೆಯ ದಿನ ಪತ್ರಿಕೆಯಲ್ಲಿ ಇವನ ಫೋಟೋ ಬರುವ ಅವಕಾಶ ತಪ್ಪಿಹೋಗುತ್ತೆ! ಕಾದ ಕೆಂಡದ ಮೇಲೆ ಕುಳಿತವನಂತೆ ಮಿಸುಕಾಡಿದ.

ಅವನ ಹೆಂಡತಿ ಸುಕುಮಾರಿ ಅಪರೂಪಕ್ಕೆ ಪತಿದೇವರು ಮನೇಲಿದ್ದಾರೆಂದು ಅವನಿಗೆ ಇಷ್ಟವಾದ, ಶ್ಯಾವಿಗೆಕೀರು, ಬೊಂಬಾಯಿ ಬೋಂಡ ಬಿಸಿಬೇಳೆಬಾತ್, ದಪ್ಪ ಮೆಣಸಿನಕಾಯಿ ಬಜ್ಜಿ, ಮಾಡಿದ್ದಳು. ಮಾತು ಮಾತಿಗೆ ಮಲ್ಲಿಗೆ ನಗು ನಗುತ್ತಾ ಅವನ ಮನಸ್ಸು ಮುದಗೊಳಿಸಿ, ಅವನು ಕೇಳಿದ ಹಾಗೆಲ್ಲಾ ತಟ್ಟೆ ತುಂಬ ಬಡಿಸಿದ್ದಳು. ಇವನು ಸಂಕೋಚಪಡದೆ ಹೊಟ್ಟೆಯಲ್ಲಿ ಜಾಗ ಖಾಲಿಯಿಲ್ಲದ ಹಾಗೆ ತಿಂದು ಮುಗಿಸಿದ್ದ. ಹೊಟ್ಟೆ ಭಾರಕ್ಕೆ ನಿದ್ರೆಯ ಜೋಂಪು! ಹಾಗೇ ಕಣ್ಣು ಮುಚ್ಚಿದ್ದ. 'ಏನ್ರೀ...!' ಎಂಬ ಸುಕುಮಾರಿಯ ಕೂಗು ಕೇಳಿ ಬೆಚ್ಚಿಬಿದ್ದ. ಒಂದೇ ನೆಗೆತಕ್ಕೆ ಆರಾಮ ಖುರ್ಚಿಯಿಂದ ಎದ್ದು ಹಿತ್ತಲ ಕಡೆ ಓಡಿದ. ಮನೆಯ ಹಿಂಭಾಗದಲ್ಲಿದ್ದ ಒಂದು ಕೊಠಡಿಯನ್ನು ವೇರ್‌ಹೌಸ್ ಅಥವಾ ಸ್ಟೋರ್ ರೂಂ ತರಹ ಉಪಯೋಗಿಸುತ್ತಿದ್ದರು. ಅದರ ಬಾಗಿಲು ತೆರೆದಿತ್ತು. ಬಾಗಿಲ ಬಳಿ ಸುಕುಮಾರಿ ಬೆದರಿ ಬಿಳುಚಿಕೊಂಡು ಬಿರಿದ ಕಣ್ಣುಗಳನ್ನು ಬಿಡುತ್ತಾ ನಿಂತಿದ್ದಳು. ಮೊದಲೇ ಬೆಳ್ಳಗೆ ಸುಂದರವಾಗಿದ್ದ ಅವಳು ಬಿಳುಚಿಕೊಂಡು ಮತ್ತಷ್ಟು ಬೆಳ್ಳಗೆ ಕಾಣುತ್ತಿದ್ದಳು.



'ಏನಾಯ್ತು?!' ಎಂದು ಕೂಗಿದ ರವಿಚಂದ್ರ. 'ಹಾವು...ಉ ಉ!' ಎಂದು ತೊದಲಿದಳು. 'ಎಲ್ಲಿ? ಎಲ್ಲಿಹೋಯ್ತು?!' ಇವನೂ ಗಾಬರಿಯಾಗಿ ಹಾರಾಡಿದ. 'ಒಳಗೆ ಹೋಯ್ತು!' ಎಂದು ಸ್ಟೋರ್ ರೂಂ ಕಡೆ ತೋರಿಸಿದಳು. ರವಿಚಂದ್ರ ಇಣುಕಿ ನೋಡಿದ. ಒಂದು ಮಣ ಕಸ ತುಂಬಿದೆ. ಕ್ಲೀನ್ ಮಾಡಿ ಎಷ್ಟು ವರ್ಷವಾಯ್ತೋ? ಜೊತೆಗೆ ಹಳೇ ಸಾಮಾನುಗಳು, ಮುರುಕಲು ಕುರ್ಚಿಗಳು, ಬೇಡವಾದ ವಸ್ತುಗಳನ್ನು ಆ ರೂಮಿನಲ್ಲಿ ಪೇರಿಸಿದ್ದರು. 'ಆ ಗೊಂದಲದ ನಡುವೆ ಎಲ್ಲಿ ಹುಡುಕುವುದು?!' ಗೊಣಗಿದ ರವಿಚಂದ್ರ. ''ನೀವೆಂಥ ಪತ್ತೇದಾರರೀ? ಇದನ್ನು ಹುಡುಕೋಧಕ್ಕೆ ಆಗದವರು ಕೊಲೆಗಾರನನ್ನು ನಿಜವಾಗಿ ಹುಡುಕ್ತೀರ?'' ಎಂದು ಸಿಡುಕಿದಳು. ರವಿಚಂದ್ರ ಅವಮಾನದಿಂದ ಕುಗ್ಗಿದ. ''ಅಲ್ಲಾಕಣೇ ಕೇಸ್ ಸ್ಟಡಿ ಮಾಡ್ದೇ ಪತ್ತೇ ಮಾಡೋಕೆ ಆಗುತ್ತಾ? ಮೊದಲು ಏನಾಯ್ತು ವಿವರವಾಗಿ ಹೇಳು! ಹಾವು ಎಲ್ಲಿಂದ ಬಂತು? ಹೇಗೆ ಬಂತು? ಯಾವ ಬಣ್ಣದ್ದು? ಯಾವ ಜಾತೀದು?..'' ಎಂದು ರಾಗವೆಳೆದ.

''ಸಾಕು ನಿಲ್ಲಿಸ್ರೀ. ಇಲಿಹೋಯ್ತು ಅಂದ್ರೆ, ಹುಲಿಹೋಯ್ತು ಅನ್ನೋರು ನೀವು! ಅಲ್ಲಾರೀ, ಹಾವು ಹೋಯ್ತು ಅಂತ ನಾನೆಲ್ಲಿ ಹೇಳ್ದೆ? ನಾನು ಹೇಳಿದ್ದು ಹಾವುರಾಣಿ ಹೋಯ್ತು ಅಂತ!'' ಎಂದು ಮೂದಲಿಸಿದಳು.

''ಹ್ಞಾ! ಹಾಗಾದ್ರೆ, ಹಾವು ಅಲ್ಲವಾ? ಹಾವು ರಾಣೀನಾ?'' ಎಂದು ಚೇತರಿಸಿಕೊಂಡ ರವಿಚಂದ್ರ 'ಒಂದು ದೊಡ್ಡ ಕೋಲು ತಂದು ಕೊಠಡಿಯಲ್ಲಿದ್ದ

ವಸ್ತುಗಳನ್ನು ಕೆದಕಿ ಹಾವುರಾಣಿಗಾಗಿ ಹುಡುಕಿದ. ''ಇದೇನ್ರೀ ರಾಮ ಹುಟ್ಟಿದ್ದು ಅಯೋಧ್ಯೇಲಿ ಅಂತ ಗೊತ್ತಿದ್ರು ನೆಲ ಅಗೆದು ಅದಕ್ಕೆ ಆಧಾರ ಹುಡುಕೋ ಹಾಗೆ ಹಾವುರಾಣಿ ಇರೋದು ಗೊತ್ತಿದ್ರೂ ಕೋಲಿನಲ್ಲಿ ಕೆದಕಿ ನೋಡ್ತಿದ್ದೀರ'' ಎಂದು ಹಂಗಿಸಿದಳು ಸುಕುಮಾರಿ. ರವಿಚಂದ್ರ ತನ್ನ ಪರೀಶೋಧನೆ ಮುಂದುವರಿಸಿದ. ಧೂಳು ತುಂಬಿದ ಮೂಲೆಯೊಂದರಲ್ಲಿ ಏನೋ ಕದಲಿದಂತಾಯಿತು ''ಸಿಕ್ತು! ಸಿಕ್ತು!!'' ಎನ್ನುತ್ತ ಕೋಲಿನಿಂದ ಜೋರಾಗಿ ಹೊಡೆದ. ಅವನ ಗುರಿ ತಪ್ಪಿ ಏಟು ಕಿಟಕಿಯಲ್ಲಿದ್ದ ಬಿಳಿ ಪೆಯಿಂಟ್ ಡಬ್ಬಕ್ಕೆ ತಾಕಿ, ಬಣ್ಣ ನೆಲಕ್ಕೆಲ್ಲಾ ಹರಡಿತು. ಈ ಗಲಾಟೇಲಿ ಬಿಳೀ ಬಣ್ಣ ಹಾವುರಾಣಿ ಮೇಲೆ ಬಿದ್ದು, ಅದು ಬಿಳಿ ಬಣ್ಣಕ್ಕೆ ತಿರುಗಿ ಎಲ್ಲಿ ತಪ್ಪಿಸಿಕೊಂಡು ಹೋಯಿತೋ ತಿಳಿಯಲಿಲ್ಲ. ''ರೀ! ಇದು ನಿಮ್ಮ ಕೈಲಿ ಆಗೋ ಕೆಲ್ಸ ಅಲ್ಲ. ಯಾರ್ನಾದ್ರೂ ಕರ್ಕೊಂಡು ಬನ್ನಿ'' ಎಂದಳು ಅವನ ಅರ್ಧಾಂಗಿ. ಅವಳು ಹೇಳಿದ್ದೇ ನೆಪ ಮಾಡ್ಕೊಂಡು ''ನನ್ನ ಮೇಲೆ ನಿನಗೆ ಅಷ್ಟೊಂದು ನಂಬಿಕೆಯಿಲ್ಲಾ ಅಂದ್ರೆ! ನೀನು ಹೇಳ್ದಾ ಹಾಗೇ ಮಾಡ್ತೀನಿ'' ಎಂದು ಹೇಳಿ ಲುಂಗಿ, ಷರಟು ಧರಿಸಿ ಹೊರಗೆ ಹೊರಟ.

''ಯಾರ್ನಾದ್ರು ಕರೀ! ಅಂದ್ರೆ, ಯಾರ್ನ ಕರಿಯೋದು?''

ರವಿಚಂದ್ರ ಚಿಂತಿಸುತ್ತಾ ತ್ರೀಕ್ಯಾಸೆಲ್ ಸಿಗರೇಟು ಸೇದುತ್ತಾ ಹೊರಟ, ಅವನ ಗುರು ''ಪತ್ತೇದಾರ - ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇರ್ಬೇಕು! ಎಂಬ ನಂಬಿಕೆ ಹೊಂದಿರಬೇಕು'' ಎಂದು ಬೋಧಿಸಿದ್ದ. ದೂರದಲ್ಲಿ ನಾಲ್ಕು ಜನ ಕೂಲಿಗಳು ಲಾರಿಗೆ ಒಂದು ಕಂಪನಿಯ ಲಗ್ಗೇಜ್ ತುಂಬುತ್ತಿರುವುದನ್ನು ನೋಡಿದ ಆಶಾ ಭಾವನೆಯಿಂದ ಅವರ ಬಳಿ ಹೋದ. ಲಾರಿ ಲೋಡ್ ಮುಗಿಯುವವರೆಗೆ ಮೌನವಾಗಿ ನಿಂತಿದ್ದ. ಅವರ ಕೆಲಸ ಮುಗಿದ ಮೇಲೆ ಅವರ ಬಳಿ ಹೋಗಿ ವಿಷಯ ತಿಳಿಸಿದ. ಅವರಲ್ಲಿ ಒಬ್ಬ ಹೇಳಿದ ''ಹಾವು ರಾಣೀನ ಹೊಡೆದು ಸಾಯಿಸಬಾರದು ಹಾಗೆ ಮಾಡಿದರೆ ಅವನು ರೋಗಿಷ್ಟನಾಗ್ತಾನೆ ಅಂತಾರೆ ನಾನು ಬರೋಲ್ಲ'' ಇನ್ನೊಬ್ಬ ಹೇಳಿದ, ''ಅದೇನು ಕಷ್ಟಲ್ಲ ಸ್ವಾಮೀ, ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಿಡಿದು ಬಾಯಿ ಕಟ್ಟಿ ಹೊರಗೆ ದೂರ ಹಾಕ್ಬಿಡಿ!'' ಅಂದ. ರವಿಚಂದ್ರನಿಗೆ ರೇಗಿತು ''ನಾನು ಪ್ಲಾಸ್ಟಿಕ್ ಚೀಲ ಹಿಡಿದು ಬಾ! ಬಾ! ಅಂದ್ರೆ ಬಂದು ಅದರಲ್ಲಿ ಕೂತ್ಕೊಳ್ಳುತ್ತಾ?'' ಎಂದು ಹಂಗಿಸಿ ನುಡಿದ. ಮುರನೆಯವನು ''ಒಂದು ಕರ್ಪೂರ ಹತ್ತಿಸಿ ಕೈಮುಗಿದು ಹೋಗ್ಬಿಡು! ಅನ್ನಿ. ಅದೇ ಹೊರಟುಹೋಗುತ್ತೇ'' ಎಂದಾಗ ರವಿಚಂದ್ರ ನಗುತ್ತಾ ''ಈ ಯಂತ್ರಯುಗದಲ್ಲೂ ಮೂಢನಂಬಿಕೆ ಹೋಗಿಲ್ಲ ಅನ್ನೋದಕ್ಕೆ ನೀನೇ ಸಾಕ್ಷಿ'' ಎಂದ. ನಾಲ್ಕನೆಯವನು ರೇಗುತ್ತಾ ''ನಾವು ಬರೋಲ್ಲ ಹೋಗಿ ಸ್ವಾಮಿ. ನಾವು

ಕರ್ನಾಟಕದವರು ಹಾವುರಾಣಿ ಓಡಿಯೋಲ್ಲ! ಯಾರಾದ್ರೂ ಹಕ್ಕಿಪಿಕ್ಕರನ್ನೇ ನೋಡಿ'' ಎಂದು ಎದ್ದುಹೋದ. ಉಳಿದವರು ಅವನ ಹಿಂದೆ ಹೋದ್ರು.

ರವಿಚಂದ್ರನ ಮುಂದೆ ಸಮಸ್ಯೆ ಮತ್ತೆ ಧತ್ತೆಂದು ನಿಂತಿತು. ಸ್ವಲ್ಪ ದೂರದಲ್ಲಿ ಛೇರ್ ತಯಾರು ಮಾಡುವ ಫ್ಯಾಕ್ಟರಿಯಿತ್ತು. ಅದರ ವಾಚ್‌ಮೆನ್ 'ಹಾವು ಹಿಡೀತಾನೆ' ಅಂತ ಜನ ಹೇಳ್ತಾ ಇದ್ದದ್ದು ನೆನಪಾಯಿತು. ''ಹಾವು ಹಿಡಿಯೋನಿಗೆ ಹಾವುರಾಣಿ ಹಿಡಿಯೋದು ಕಷ್ಟವೇ?'' ಎಂದು ಯೋಚಿಸಿ ಅವನ ಬಳಿಗೆ ಹೋದ. ವಾಚ್‌ಮೆನ್ ರಾಮಕೃಷ್ಣ ಇವನನ್ನು ನೋಡಿ ನಮಸ್ಕಾರ ಮಾಡಿದ. ಆಗಾಗ ರವಿಚಂದ್ರ ಅವನಿಗೆ ರಾತ್ರಿ ಷಿಫ್ಟ್‌ನಲ್ಲಿ ಕೆಲಸ ಮಾಡುವಾಗ ಬ್ರಾಂದಿಗೆ ಹಣ ಕೊಡ್ತಿದ್ದ. ಈ ಲೊಕಾಲಿಟಿ (Locality) ಸಮಾಚಾರಗಳನ್ನು ಸಂಗ್ರಹಿಸಿ ಅವನು ರವಿಚಂದ್ರನಿಗೆ ಹೇಳ್ತಿದ್ದ. ರವಿಚಂದ್ರ ಅವನಿಗೆ ವಿಷಯ ತಿಳಿಸಿದ. ''ಅಯ್ಯೋ ಬಿಡೀ ಸ್ವಾಮಿ ಅಷ್ಟೇ ತಾನೆ ನನಗೆ ಭಾನುವಾರ ರಜಾದಿನ ಅವತ್ತು ಬಂದು ನೋಡ್ತೀನಿ - ಅದು ಎಲ್ಲಿದ್ರೂ ಹಿಡಿದು ಕೊಡ್ತೀನಿ'' ಎಂದು ಭರವಸೆ ನೀಡಿದ. ರವಿಚಂದ್ರ ಪೆಚ್ಚಾದ ''ಭಾನುವಾರಕ್ಕೆ ಇನ್ನೂ ನಾಲ್ಕು ದಿನ ಇದೆ. ನಾಲ್ಕು ದಿನ ಹಾವುರಾಣಿ ಅಲ್ಲೇ ಇರುತ್ತಾ'' ಎಂದು ಬೇಸರದಿಂದ ಹೇಳಿದ. ''ನಿಮ್ಮ ಸ್ಟೋರ್ ರೂಂ ಗಿಂತ ಒಳ್ಳೇಜಾಗ ಅದಕ್ಕೆ ಬೇರೆಯೆಲ್ಲಿ ಸಿಗುತ್ತೆ ಅಲ್ಲೇ ಸಂಸಾರ ಹೂಡುತ್ತೆ ನೋಡ್ತಿರಿ!'' ಎಂದ ವಾಚ್‌ಮೆನ್. ಇವನ ಸಹವಾಸವೇ ಬೇಡ ಅಂತ ಅಲ್ಲಿಂದ ಹೊರಟ ರವಿಚಂದ್ರ.

ಅವನು ಹಾಗೇ ಬರ್ತಾ ಇರ್ಬೇಕಾದ್ರೆ ರಸ್ತೆ ಬದಿಯಲ್ಲಿ ಕೇಬಲ್ ಹಾಕಲು ಕೂಲಿ ಜನ ಅಗೆಯುತ್ತಾ ಇದ್ರು. ಅಲ್ಲಿ ಸ್ವಲ್ಪ ಹೊತ್ತು ನಿಂತು ಒಬ್ಬೊಬ್ಬರನ್ನು ಗಮನಿಸಿದ. ಇವರಲ್ಲಿ ಯಾರನ್ನು ಕೇಳಲಿ? ಯೋಚಿಸಿದ. 'ರಸ್ತೆ ಬದಿಯಲ್ಲಿ ಟೆಂಟ್ ಹಾಕ್ಕೊಂಡು ಜೀವಿಸುವ ಈಜನ ಹಾವುಗಳಿಗೆ ಹಾವು ರಾಣಿಗಳಿಗೆ ಹೆದರೋ ಜನ ಅಲ್ಲ' ಎಂದು ತರ್ಕ ಮಾಡಿದ. ಕೊನೆಗೆ ಒಬ್ಬನನ್ನು ಆಯ್ಕೆ ಮಾಡಿ ಅವನ ಬಳಿಗೆ ಹೋದ. ''ಎನ್ನ ಸಾಮಿ? ಎನ್ನಾ ವೇಣು?'' ಎಂದ ಅವನು. ರವಿಚಂದ್ರ ಹರಕಲು ತಮಿಳು ಭಾಷೆಯಲ್ಲಿ ತನ್ನ ಕಷ್ಟ ಹೇಳಿಕೊಂಡ.

''ಅವಳವುದಾನಾ! ನಾವರ್ರೇ, ವಂದು ಪಾಕ್ರೇ!'' ಎಂದ ಅವನು, ತನ್ನ ಗುದ್ದಲಿ ಪಿಕಾಸಿ ಪಕ್ಕಕ್ಕಿಟ್ಟು ಜೊತೆಯವನಿಗೆ ಏನೋ ಹೇಳಿ, ರವಿಚಂದ್ರನ ಜೊತೆ ಹೊರಟ, ರವಿಚಂದ್ರ ಸರಸರನೆ ಹೊರಟ ಅವನ ಹಿಂದೆ ಈ ಕೂಲಿ - ಮನೆ ತಲುಪಿದ ಮೇಲೆ ಸ್ಟೋರ್ ರೂಂ ತೋರಿಸಿ ''ಇಲ್ಲಿದೆ ಹಾವುರಾಣಿ'' ಎಂದ ರವಿಚಂದ್ರ. ಆ ಕೂಲಿ 'ನೀವೆಲ್ಲಾ ದೂರ ಇರಿ' ಎಂದು ಹೇಳಿ ಮೋಟು

ಪಂಚೆಯನ್ನು ಎತ್ತಿ ಕಟ್ಟಿ ಒಂದೊಂದೇ ಸಾಮಾನುಗಳನ್ನು ತೆಗೆದು ನಲ್ಲಿ ನೀರಿನಲ್ಲಿ ತೊಳೆದು ಅಲ್ಲೇ ಇದ್ದ ಒಂದು ಬಟ್ಟೆಯಲ್ಲಿ ವರೆಸಿ ಸ್ಟೋರ್ ರೂಂನಿಂದ ದೂರದಲ್ಲಿ ಇಡತೊಡಗಿದ. ಸ್ವಲ್ಪ ಹೊತ್ತಾದ ಮೇಲೆ ಎಲ್ಲಾ ವಸ್ತುಗಳು ಹೊರಬಂದವು. ಒಂದು ಕೋಲಿಗೆ ಪರಕೆ ಕಟ್ಟಿ ಗೋಡೆಯ ಮೇಲಿದ್ದ ಜೇಡರ ಬಲೆ, ಧೂಳುಗಳನ್ನು ಕೊಡವಿ, ನೆಲಗುಡಿಸಿ ಕಸವನ್ನು ಒಂದು ವಡಕಲು ಬಕೀಟಿಗೆ ತುಂಬಿ ಹೊರಗೆ ದೂರ ತೆಗೆದುಕೊಂಡು ಹೋಗಿ ಬಿಸಿಸಿ ತೊಟ್ಟಿಗೆ ಹಾಕಿ ಬಂದ. ಸ್ವಚ್ಛಗೊಳಿಸಿದ ನೆಲವನ್ನು ನೀರು ಹಾಕಿ ತೊಳೆದ. ಚೆಲ್ಲಿದ್ದ ಬಿಳಿ ಪೈಂಟನ್ನು ಉಜ್ಜಿ ತೊಳೆದು ನೆಲ ಶುದ್ಧ ಮಾಡಿದ. ನಾನು ಬಿಳೀ ಷರಟು ಧರಿಸಿ ನಿಂತಿದ್ದರಿಂದ ''ನೀವು ದೂರಯಿರಿ ಬಿಳೀ ಬಟ್ಟೆ ಕೊಳೆಯಾಗುತ್ತೆ'' ಎಂದು ಅವನ ಭಾಷೆಯಲ್ಲಿ ಹೇಳಿದ. ಯುದ್ಧದಲ್ಲಿ ಸೇನೆಯ ಮುಂದಾಳಾಗಿ ನುಗ್ಗಿ ಹೋಗುವ ದಂಡನಾಯಕನಂತೆ ರವಿಚಂದ್ರ ಅವನ ಹಿಂದೆ ಮುಂದೆ ಸುತ್ತಿ ಅವನ ಕೆಲಸವನ್ನು ಉಸ್ತುವಾರಿ ಮಾಡ್ತಿದ್ದ. ''ಇಲ್ಲಿ ಏನೂ ಇಲ್ಲ ನೀವೇ ನೋಡಿ!'' ಎಂದು ಅವನ ಭಾಷೆಯಲ್ಲಿ ಹೇಳಿ ಕೈಯಾಡಿಸಿದ. ರವಿಚಂದ್ರನೂ ಪೆಚ್ಚಾದ. ಸುಕುಮಾರಿ ಸುಸ್ತಾದಳು'' ಹಾವುರಾಣಿಯೆಲ್ಲಿಗೆ ಹೋಯ್ತು?'' ಬಗೆಹರಿಯಲಾಗದ ಕಾಶ್ಮೀರದ ಸಮಸ್ಯೆಯಂತೆ, ಸಮಸ್ಯೆ ಹಾಗೇ ಉಳಿಯಿತು.

ರವಿಚಂದ್ರ ಅವನ ಕೈಗೆ ಇಪ್ಪತ್ತೈದು ರೂಪಾಯಿ ಕೊಡಲು ಹೋದ. ''ವೇಂಡಾ ಸ್ವಾಮಿ, ಎನಕ್ಕು ಇಂದ ಟೇಬಲ್ ಛೇರ್ ಕುಡುಂಗೋ!'' ಎಂದ ಕೂಲಿ. ಸ್ವಲ್ಪ ವ್ಯತ್ಯಾಸವಾಗಿದ್ದ ಟೇಬಲ್, ಛೇರ್ ತೋರಿಸಿದ.

''ನಿನಗ್ಯಾಕಯ್ಯ ಟೇಬಲ್ಲು ಛೇರು?'' ಎಂದ ರವಿಚಂದ್ರ.

''ನನ್ನ ಮಗ ಸ್ಕೂಲಿಗೆ ಹೋಗ್ತಿದ್ದಾನೆ. ಅವನು ಓದಿಕೊಳ್ಳಲು ಅನುಕೂಲವಾಗುತ್ತೇ!'' ಎಂದು ಕನ್ನಡ ಭಾಷೇನ ಕೊಲೆ ಮಾಡುತ್ತ ಕೇಳಿದ.

''ಅಯ್ಯೋ! ಅಯ್ಯೋ!! ಇವನೇನ್ರೀ ಟೇಬಲ್ಲು ಛೇರು ಕೇಳ್ತಾನೆ?'' ಎಂದು ರಾಗ ಎಳೆದಳು ಸುಕುಮಾರಿ. ರವಿಚಂದ್ರ ಅವಳ ಕಡೆ ನೋಡುತ್ತಾ ಹೇಳಿದ.

''ಈ ರೀತಿ ಬೇಡವಾದ ವಸ್ತುಗಳನ್ನು ಇಟ್ಟುಕೊಂಡಿದ್ದರಿಂದ್ಲೇ ಹಾವುರಾಣಿ ಕಾಟ ಬಂದದ್ದು ಇವೆಲ್ಲಾ ನಾವು ಜಪಾನೀಯರಿಂದ ಕಲೀಬೇಕು. ಅವರು 'ಐದು ಎಸ್' ತತ್ವ ಪಾಲಿಸ್ತಾರೆ. ಬೇಡವಾದ ವಸ್ತುವನ್ನು ಹೊರಗೆ ಎಸೆಯಿರಿ, ಉಪಯೋಗಿಸುವ ವಸ್ತುವನ್ನು ಶುದ್ಧವಾಗಿಡಿ, ಯಾವ ವಸ್ತು ಎಲ್ಲಿತ್ತೋ


ಉಪಯೋಗಿಸಿದ ಮೇಲೆ ಅಲ್ಲೇಯಿಡಿ ಓಗೆ ಜಪಾನೀಯರು ಐದು ತತ್ವಗಳನ್ನು ಪಾಲಿಸ್ತಾರೆ. ನಾವು ಹಾಗೇ ಮಾಡೋಣ.''

ರವಿಚಂದ್ರ, ಕೂಲಿಯನ್ನು ಕರೆದು, ''ನಿನಗೆ ಈ ವಸ್ತುಗಳಲ್ಲಿ ಅದೇನು ಬೇಕೋ ಎಲ್ಲಾ ತೆಗೆದುಕೋ, ಉಳಿದದ್ದನ್ನು ಜೋಡಿಸಿಡು'' ಎಂದು ಹೇಳಿದ. ಕೂಲಿ ಹಾಗೆ ಮಾಡಿ ಹೊರಟುಹೋದ. ಅಷ್ಟು ಹೊತ್ತಿಗೆ ಸಂಜೆಯಾಗಿ ಕತ್ತಲಾವರಿಸಿತು. ರವಿಚಂದ್ರ ಮತ್ತು ಸುಕುಮಾರಿ ಒಳಗೆ ಬಂದರು.

''ಅಬ್ಬ! ದೊಡ್ಡ ಪರಿಶೋಧನೆ ಮುಗೀತು. ಒಂದು ಬಟ್ಟಲು ತಣ್ಣನೆಯ ನಿಂಬೆ ಹಣ್ಣಿನ ಪಾನಕ ತಂದುಕೊಡು ಸುಕುಮಾರಿ'' ಎಂದು ಹೇಳಿ, ಮುಖ ಕೈಕಾಲು ತೊಳೆದು ತಲೆ ಬಾಚಲು ಕನ್ನಡಿ ಮುಂದೆ ನಿಂತ. ಸುಕುಮಾರಿ ರೆಫ್ರಿಜಿರೇಟರಿನಲ್ಲಿದ್ದ ಪಾನಕವನ್ನು ಒಂದು ಬಟ್ಟಲಿಗೆ ಸುರಿದು ತಂದಳು. ಇದ್ದಕ್ಕಿದ್ದಂತೆ ಚಿಟ್ಟನೆ ಚೀರಿದಳು. ಪಾನಕದ ಬಟ್ಟಲು ಕೆಳಗೆ ಹಾಕಿ ಓಡಿಹೋದಳು. ರವಿಚಂದ್ರನಿಗೆ ಗಾಬರಿಯಾಯಿತು 'ಏನಾಯಿತು ಇವಳಿಗೆ!' ಎಂದು ತಲೆ ಬಾಚಲು ಕನ್ನಡಿ ನೋಡಿದ ''ಅಯ್ಯೋ! ಸತ್ತೇ! ಕಾಪಾಡೀ!'' ಎಂದು ಅರಚಿ ಕುಣಿದಾಡತೊಡಗಿದ. ಬಿಳೀಪೈಂಟ್‌ನಲ್ಲಿ ತೋಯ್ದುಹೋಗಿದ್ದ ಹಾವುರಾಣಿ ಅವನ ಬಿಳೀ ಷರಟಿನ ಮೇಲೆ ಹತ್ತಿ ಅವನ ತಲೆಮೇಲೆ ಕುಳಿತಿತ್ತು.

★★★

ನನಗೆ ಫಾಸ್ಟ್ ಫುಡ್ ಅಂದ್ರೆ ಪ್ರಾಣ



ಹೊಸಗನ್ನಡಕ್ಕೆ ಹೊಸ ಪದಗಳು

- ವಿಜಯ್

ಅಲ್ಸಹಾಫಿಕೆ

ಬಾಯಿಗೆ ಬಂದಹಾಗೆ ಬೊಗಳೆ ಬಿಡುವುದು, ಉದಾಹರಣೆ: ನಮ್ಮ ಪಾಪು ನೋಡ್ರಿ, ಇತ್ತೀಚೆಗೆ, ಎಲ್ಲಾ ಸಬ್ಜೆಕ್ಸ್‌ಗಳಲ್ಲೂ ನೂರಕ್ಕೆ ನೂರು ತೆಗೀತೀನಿ ಅಂತ ಅಲ್ಸಹಾಫಿಕೆ ಶುರುಮಾಡ್ಕೊಂಡು ಬಿಟ್ಟಿದಾನೆ.

ಬ್ಲೇರ್ ಬಾಳಿ

ಕಂಡಕಂಡವರ ಕಾಲು ನೆಕ್ಕುವುದು ಉದಾಹರಣೆ: ನಾನು ನಮ್ಮ ಪಕ್ಕದ್ಮನೆಗೆ ಹೋದಾಗಲೆಲ್ಲಾ ಅವರ್ಮನೆ ಜಿಮ್ಮಿ ನನ್ನ ಕಾಲು ನೆಕ್ಕಕ್ಕೆ ಶುರು. ಅದಕ್ಕೆ ಈ ಬ್ಲೇರ್‌ಬಾಳಿ ಹೇಗೆ ಬಂತೋ ತಿಳೀದಲ್ಲಾ.

ವೀರಪ್ಪಾಗ್ರಹಣ

ಚಂದ್ರಗ್ರಹಣ, ಸೂರ್ಯಗ್ರಹಣ ಇವುಗಳಂತೆ ಆಗಾಗ್ಗೆ ಹಿಡಿದ ಹಾಗೆ ಮಾಡಿ ತಕ್ಷಣವೇ ಬಿಡುಗಡೆಯಾಗುವುದು. ಉದಾಹರಣೆ: ರಾತ್ರಿ ಆಯ್ತು ಅಂದ್ರೆ ನಮ್ಮನೇಲಿ ಇಲಿಕಾಟರೀ. ಅದನ್ನ ಹಿಡಿಯೋಕ್ಕೆ ಎಷ್ಟು ಪ್ರಯತ್ನಿಸಿದ್ರೂ ವೀರಪ್ಪಾಗ್ರಹಣ ಆಗ್ಬಿಟ್ಟಿದೇ.

ನಿತಿಷ್ ಸಬೂಬು

ಹುರುಳಿಲ್ಲದ ಕಾರಣ ಹೇಳಿ ತಪ್ಪಿಸಿಕೊಳ್ಳುವಿಕೆ ಉದಾಹರಣೆ: ನಮ್ಮ ಇಲೆಕ್ಟ್ರಿಸಿಟಿ ಬಿಲ್ಲು ಮೂರು ತಿಂಗಳಿಂದ ಕಂಡಾಪಟ್ಟೆ ಏರಿಸಿಬಿಟ್ಟಿದ್ದಾರ್ರೀ. ಅದನ್ನ ಸರಿಪಡಿಸಿಕೊಳ್ಳೋಣ ಅಂತ ಯಾವಾಗ ಹೋದ್ರೂ ಏನೋ ನಿತಿಷ್ ಸಬೂಬು ಹೇಳಿ ನನ್ನನ್ನ ಸಾಗಹಾಕಿಬಿಡ್ತಾರೆ ಕಣ್ರೀ.

ಬುಷ್ಟಿಸಮ್

ಪೆದ್ದುತನದ ಒರಟು ಮಾತು ಉದಾಹರಣೆ: ನಮ್ಮ ಶಾಂತು ಮಗೂ ಕಿರಣ್ ಇದಾನಲ್ಲಾ, ಅವನನ್ನ ಸ್ಕೂಲಿಗೆ ಹೋಗೊ ಅಂದ್ರೆ 'ಖಂಡಿತಾ ಹೋಗುಲ್ಲ. ಈ ವಿಷಯಕ್ಕೆ ನೀವು either with me or against me' ಅಂತ ರೋಫ್ ಹಾಕುತ್ತೇ ನೋಡಿ.

ಯೂನೋರೋಧನ


ಅರಣ್ಯರೋಧನ ದಂತೆಯೇ ಇದೂ ಸಹಾ. ಉದಾಹರಣೆ: ''ವೀರಪ್ಪನನ್ನು ಹಿಡಿಯಲೇಬೇಕು'', ''ಸರ್ಕಾರದಲ್ಲಿ ಪಾರದರ್ಶಕತೆ ಇರಬೇಕು'' ಇತ್ಯಾದಿ.

ಇರಾಕಿಸು

ಹೇಳಹೆಸರಿಲ್ಲದಂತೆ ಮಾಡು ಉದಾಹರಣೆ: ಅಮ್ಮಾ ಸ್ಕೂಲಿಂದ ಬರ್ತಾ ದಾರಿಲಿ ಒಂದು ಇರುವೆ ಗೂಡು ಕಾಣಿಸ್ತು. ಬೂಟ್ಸ್ ಕಾಲಲ್ಲಿ ಅದನ್ನ ಚೆನ್ನಾಗಿ ಹೊಸಗಿ ಇರಾಕಿಸ್ಬಿಟ್ಟೇಮ್ಮಾ.

ಅನುಗಾಲವಿರಲಿಕ್ಕೆ
ನಾವಿಲ್ಲಿ ಬಂದಿಲ್ಲ
ಅದಕಾಗಿ
ರಹದಾರಿಯನ್ನೇನೂ
ತಂದಿಲ್ಲ
ಇರುವುದೊಂದು ನಾಲ್ಕೋ
ಎಂಟೋ ದಿನ
ಹೀಗಿರುವಾಗ ಹರಿಸಬಾರದೆ
ನಗೆ ದಿನಾ ದಿನಾ

– ಬೇಲೂರು ರಾಮಮೂರ್ತಿ



ಹೆಸರಿನಲ್ಲೇನಿದೆ?

– ಬಾಲು

"ನಿನ್ನ ನಾಮದ ಬಲವೊಂದಿದ್ದರೆ ಸಾಕು" ಎಂದು ಪುರಂದರದಾಸರು ಹೇಳಿದರು. ಇದು ಹೆಸರಿನ ಕುರಿತು ಹೇಳಿದ್ದಲ್ಲ, ಉದ್ದ-ಅಡ್ಡ, ಸಿಂಗಲ್ ಡಬ್ಬಲ್ ನಾಮದ ಕುರಿತಾಗಿಯೇ ಹೇಳಿದ್ದು ಎಂದು ನನ್ನ ಮಾಧ್ವ ಸ್ನೇಹಿತರ ತರ್ಕ, ಶೇಕ್ಸ್‌ಪಿಯರ್ 'call by whatever name, Rose Smells Sweet' (ಯಾವುದೇ ಹೆಸರಿನಿಂದ ಕರೆಯಿರಿ, ಗುಲಾಬಿ ಪರಿಮಳವನ್ನು ಬೀರುತ್ತದೆ) ಎಂದ. ಯಾವ ಹೆಸರಿಟ್ಟರೂ ಒಂದೇ; ಮನುಷ್ಯನನ್ನು ತಿದ್ದಲಾಗದು ಎಂಬ ಕೆಟ್ಟ ಅರ್ಥವನ್ನೇ ಶೇಕ್ಸ್‌ಪಿಯರ್ ಹೇಳಿದ್ದಾನೆಂದು ಕುಹಕಿಗಳು ಟೀಕಿಸುವುದುಂಟು. ಉಸಿರಳಿದರೂ ಹೆಸರುಳಿಯುತ್ತದೆ ಎಂದಿದ್ದಾರೆ ದಾರ್ಶನಿಕರು. ಹೀಗೆ ಹೇಳಿದರೆ ಜನರು ಮರಣೋತ್ತರ ಲಾಭಕ್ಕಾಗಿಯಾದರೂ ಬದುಕಿರುವಾಗ ಒಳ್ಳೆಯ ಕೆಲಸವನ್ನು ಮಾಡಿಯಾರು ಎಂದು ಅವರ ತರ್ಕವಿರಬೇಕು.

ಹೆಸರು ಹುಟ್ಟಿನಿಂದ ಸಾಯುವವರೆಗಷ್ಟೇ ಅಲ್ಲ, ಸಾವಿನಾಚೆಗೂ ಇದೆ ಎಂದೆನಷ್ಟೇ? 'ಹೆಸರು ಕ್ಷೀರಸಾಗರಭಟ್ಟ ಮಜ್ಜಿಗೆ ನೀರಿಗೆ ತತ್ವಾರ' ಎಂಬ ಮಾತಿದೆಯಷ್ಟೇ! ಆದರೂ ಒಳ್ಳೆಯ ಹೆಸರೇ ಬೇಕು. ಆಧುನಿಕ ಯುಗದಲ್ಲಿ ಕೂಸು ಹುಟ್ಟುವ ಮೊದಲು ಕುಲಾವಿಯಲ್ಲ, ಕಾಸಿನ ಹೆಸರು, ಮನೆಯಲ್ಲಿ ಒಬ್ಬಾಕೆ ಗರ್ಭಿಣಿಯಾದಳೆಂದು ಸಂಶಯ ಬಂದರೆ ಸಾಕು, ಗಂಡಾದರೆ ಯಾವ ಹೆಸರು, ಹೆಣ್ಣಾದರೆ ಯಾವ ಹೆಸರು ಎಂಬ ಚರ್ಚೆ, ಸಲಹೆ - ಸೂಚನೆ. ಹೀಗಾಗಿ ಹೊಸ ಹೊಸ ಪದಗಳು ಆವಿಷ್ಕಾರವಾಗುತ್ತವೆ. ಸ್ವಯಂ ಸೃಷ್ಟಿಸಿಕೊಂಡ ಕೆಲವು ಹೆಸರುಗಳಿಗೆ ಅರ್ಥವನ್ನು ಹುಡುಕುವುದು ಇನ್ನೊಂದು ಸಾಹಸ. ಹೀಗೆ ಹೆಸರನ್ನು ಅರಸುವುದಕ್ಕಾಗಿಯೇ ಆಕಾಶವಾಣಿಯನ್ನು, ವಿವಿಧ ಭಾರತೀಯನ್ನು ಸ್ವಿಚ್ ಆನ್ ಮಾಡಿ ಅಲ್ಲಿನ ಶ್ರೋತೃಗಳ ಹೆಸರನ್ನು ಪಟ್ಟಿ ಮಾಡುವವರೂ ಇದ್ದಾರೆ. ಹೊಸ ಹೆಸರನ್ನಿಡುವುದು ಹೊಸತೇನಲ್ಲ, ಹಳೆಯ ಕತೆ. ಹೆಸರಿಡುವುದೇ ಒಂದು ಸಂಭ್ರಮದ ಸಮಾರಂಭ. 'ಅತಿ ಸಂತಸದೊಳ್ ಆತ್ಮಜೆಗೆ ಅಖಿಲ ವಿಭವದಿ ಹೆಸರಿಟ್ಟನು, ಮಾಯೆಯೆಂಬ ನವೀನ ನಾಮವನು' ಎಂದಿಲ್ಲವೇ ಚಾಮರಸ?

ನನ್ನ ನೆರೆಮನೆಗೊಬ್ಬ ಹುಡುಗ ಬಂದ. ಅವನು ನನ್ನ ಮಗನ ಸಹಪಾಠಿಯಾದ್ದರಿಂದ ನಮ್ಮ ಮನೆಗೆ ಬರುತ್ತಿದ್ದ. ಕುತೂಹಲಕ್ಕಾಗಿಯೇ, ಪರಿಚಯಕ್ಕಾಗಿಯೋ ಅವನ ಹೆಸರನ್ನು ಕೇಳಿದೆ. 'ಸಂಜೀತ್' ಎಂದ 'ಹಾಗಂದ್ರೆ...?' ಅವನಿಗೆ ಉತ್ತರ ಗೊತ್ತಿರಲಿಲ್ಲ. 'ಅರ್ಥ ಇಲ್ಲದೆ ಹೆಸರಿಟ್ಟರಾ? ಎಂದೆ. ಅದಕ್ಕವನು ನೀಡಿದ ವಿವರಣೆ ಇದು: ಅವನಿಗೆ ಮನೆಯಲ್ಲಿ 'ಸಂದೀಪ್'

ಎಂದು ಹೆಸರಿಟ್ಟಿದ್ದರಂತೆ. ಕಾನ್ವೆಂಟ್ ಶಾಲೆಗೆ ಸೇರಿಸುವಾಗ 'SUNDEEP' ಎಂದು ಇಂಗ್ಲೀಷಿನಲ್ಲಿ ಬರೆಯುವುದನ್ನು ಮಿಸ್ 'SUNBEET' ಎಂದು ಕಾಣುವಂತೆ ತನ್ನ ಮೋಡಿ ಮಾಡುವ ಅಕ್ಷರಗಳಲ್ಲಿ ಬರೆದಳಂತೆ. ಅವಳ ಮೋಡಿಯನ್ನೇ ಗಮನಿಸುತ್ತಿದ್ದುದರಿಂದ ಆ ಹುಡುಗನ ತಂದೆ ಈ ತಪ್ಪನ್ನು ಗಮನಿಸಲಿಲ್ಲವೆನ್ನುವುದು ಕುಹಕವಾದೀತು. ಅದೇ ಹೆಸರು ಶಾಶ್ವತವಾಯಿತು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎನ್ನುತ್ತಾರೆ. 'ಹಾಗೆಯೇ ಸರಿಯಾದ ಹೆಸರಿಗಳಿವುಂಟು, ತಪ್ಪು ಹೆಸರಿಗಳಿವಿಲ್ಲ' ಎಂದೂ ಹೇಳಬಹುದು.

ಒಳ್ಳೆ ಹೆಸರಿಟ್ಟರೂ ಉಪಯೋಗವಿಲ್ಲ. ಬಸಪ್ಪ ಎಂಬವರನ್ನು ಬಸ್ ಎಂದು ಕರೆಯುತ್ತಾರೆ. ಕಾರ್ಯಪ್ಪ ಎಂಬವರನ್ನು ಕಾರು ಎನ್ನುತ್ತಾರೆ. ಕಲಾ ಎಂಬಾಕೆಯನ್ನು Kala ಎಂದು ಓದಿ ಕಾಲ ಎಂದು ಕರೆದವರೂ ಇದ್ದಾರೆ. ಹೀಗೆ ಹೆಸರು ಮುಖ್ಯವೋ ಅಮುಖ್ಯವೋ ಅಂತೂ ಹುಟ್ಟಿನಿಂದ ಸಾವಿನವರೆಗೆ ನಮ್ಮ ಜೊತೆಯಲ್ಲೇ ಇರುವುದು ಹೌದು ತಾನೆ? ಅಳಿವುದು ಕಾಯ ಉಳಿವುದು ಕೀರ್ತಿ ಎಂದವರು ಹೆಸರನ್ನೇ ಉದ್ದೇಶಿಸಿ ಹೇಳಿರಬೇಕು. ಒಬ್ಬನ ಕೀರ್ತಿ ಉಳಿಯುವುದೆಂದರೇನು? ಹೆಸರು ಉಳಿಯುವುದು. ಆ ಹೆಸರಿನ ಮೂಲಕ ಆತನೂ ಅಂತಹ ಹೆಸರಿನ ಇತರರೂ ಜನರ ನಾಲಗೆಯನ್ನು ನಲಿದಾಡುವುದು. ಉದಾಹರಣೆಗೆ 'ಗಾಂಧಿ' ಎಂಬ ಹೆಸರು. ನಮ್ಮ ಹಿಂದಣ ತಲೆಮಾರಿಗೆ ಗಾಂಧಿ ಎಂದರೆ ಮೋಹನದಾಸ ಕರಮಚಂದ ಗಾಂಧಿ; ಸ್ವಲ್ಪ ಈಚೆಗೆ ಬಂದರೆ ಜನರಿಗೆ ಗೊತ್ತಿರುವುದು ಇಂದಿರಾಗಾಂಧಿ; ಈಗಿನ ಜನರಿಗೆ ಗಾಂಧಿ, ಎಂದರೆ ಸೋನಿಯಾ ಗಂಧಿ. ಇನ್ನೂ ನಮ್ಮ ಅದೃಷ್ಟಕ್ಕೆ 'ಗಾಂಧಿ' ಎಂಬ ಹೆಸರಿನ ಪ್ರಸಿದ್ಧ ಸಿನಿಮಾತಾರೆಯೋ ಕ್ರಿಕೆಟ್ಟಿಗನೋ ಉದ್ಭವಿಸಿಲ್ಲ. ಅಂತಹ ವ್ಯಕ್ತಿಯೊಬ್ಬ ಸೃಷ್ಟಿಯಾದರೆ ಮೇಲೆ ಹೇಳಿದ ಎಲ್ಲ ಗಾಂಧಿಗಳೂ ಮಣ್ಣುಪಾಲಾದರು. 'ಗಾಂಧಿ' ಎಂದರೆ ಯಾರು ಎಂದು ಕೇಳಿದ್ದಕ್ಕೆ ಒಬ್ಬಾತ 'ಬೆನ್ ಕಿಂಗ್‌ಸ್ಲೆ' ಎಂದು ಉತ್ತರಿಸಿದ್ದಾನಂತೆ. ಅವನ ದೃಷ್ಟಿಯಲ್ಲಿ ಗಾಂಧಿಯನ್ನು ಅಜರಾಮರಗೊಳಿಸಿದವನು ಆ ಪಾತ್ರ ವಹಿಸಿದ ಬೆನ್‌ಕಿಂಗ್‌ಸ್ಲೆ ಮತ್ತು ಅದೇ ಹೆಸರಿನ ಚಿತ್ರ ನಿರ್ಮಿಸಿದ ರಿಚಾರ್ಡ್ ಬರ್ಟನ್. ಇಂತಹದನ್ನು ನೋಡಿಯೇ ಕವಿ ಹೇಳಿದ್ದು. ಓಡುವ ಗಾಡಿಯ ಕೆಳಗಡೆಯೊಳೆ ತೂರಿ। ಹೋಗುತಲಿದ್ದುದು ಶುನಕ।। ತಾನೇ ಗಾಡಿಯನೆಳೆವೆನೆಂದು ಅದು ಬಡಬಡಿಸುವುದು ಕೊನೆ ತನಕ।।

ನಾನು ನಾಮ ಹಾಕುವುದಿಲ್ಲವಾದ್ದರಿಂದ ಹೆಸರಿನ ಬಲ ಎಂದೆ. ಹೆಸರಿನ ಬಲದಲ್ಲೇ ಅನೇಕ ಕೆಲಸಗಳನ್ನು ಮಾಡಬಹುದು. ತನ್ನ ಹೆಸರಿನ ಅಥವಾ ಇನ್ನೊಬ್ಬರ ಹೆಸರಿನ - ಅಂತೂ ಯಾವುದಾದರೂ ಹೆಸರಿನ ಬಲದಲ್ಲಿ ಕಾರ್ಯ ಕೈಗೂಡಿದರೆ ಸಾಕು ಎಂಬವರಿದ್ದಾರೆ. ನನ್ನ ಹೆಸರಿನ ಬಲ ನನಗೇ ಗೊತ್ತಿರಲಿಲ್ಲ. ನಾನು ಸರಕಾರಿ ಕಛೇರಿ, ಬ್ಯಾಂಕು ಮುಂತಾದ ಕಡೆಗೆ ಹೋಗಿ ವಿನಯಪೂರ್ವಕವಾಗಿ ನನ್ನ ಅಹವಾಲುಗಳನ್ನು ಹೇಳಿಕೊಂಡು ಕಾದುಕುಳಿತು ನನ್ನ ಕೆಲಸವನ್ನು ಒಂದೇ ಕಂತಿನಲ್ಲಿ

ಅಥವಾ ಅನೇಕ ಕಂತುಗಳಲ್ಲಿ ಮುಗಿಸುವುದುಂಟು. ನಿರುಪದ್ರವಿ ಪ್ರಾಣಿಯೆಂಬ ಅಭಿಪ್ರಾಯದಲ್ಲಿ ಅವರೆಲ್ಲ ಹೇಳುವುದು ಹೀಗೆ: 'ತುಂಬಾ ಒಳ್ಳೆಯವರು, 'ಪಾಪ!' ಇಲ್ಲಿ 'ಪಾಪ!' ಎನ್ನುವಾಗ ಅವರ ಕಣ್ಣಿಗೆ ನಾನೊಬ್ಬ ಬಲಿಪಶುವಿನಂತೆ ಕಾಣಿಸುತ್ತಿದ್ದೇನೆಂಬ ಸಂಶಯ ನನಗೆ ಬ್ಯಾಂಕಿನ ಕೌಂಟರಿನಲ್ಲಿ ನಾನು ಒಂದು ದಿವಸ ಪಾಸ್ ಪುಸ್ತಕ ಎಂಟ್ರಿ ಹಾಕಿಸಲು ಬಹಳ ಹೊತ್ತು ಕಾಯುತ್ತಿದ್ದದ್ದನ್ನು ಕಂಡ ಮ್ಯಾನೇಜರು 'ನೀವಿಲ್ಲಿ ಬನ್ನಿ ಸಾರ್! ಅವರು ಇದೀಗ ಟ್ರಾನ್ಸ್‌ಫರ್ ಆಗಿ ಬಂದವರು, ಅವರಿಗೇನು ಗೊತ್ತು ನಿಮ್ಮ ಬಗ್ಗೆ', ಎಂದು ಏಕಕಾಲಕ್ಕೆ ನನಗೂ ಆ ಕ್ಲರ್ಕಿಗೂ ಸಹಾನುಭೂತಿಯುಕ್ತ ರಿಯಾಯಿತಿ ಸೂಚಿಸಿದರು. ಮ್ಯಾನೇಜರ್ ಮಾತನಾಡಬೇಕಾದರೆ ನಾನೊಬ್ಬ ಮಹಾನುಭಾವನೇ ಇರಬೇಕೆಂದು ಪರಿಭಾವಿಸಿ ಈ ಕ್ಲರ್ಕ್ ನನ್ನತ್ತ ಹಲ್ಲು ಕಿರಿದ.

ನನ್ನ ಕೆಲಸದ ನಿಬಿಡತೆಯೋ ನನ್ನ ಸೋಮಾರಿತನವೋ ಅಥವಾ ಇನ್ನೊಬ್ಬರ ಮೂಲಕ ಕೆಲಸ ಮಾಡಿಸುವುದರಿಂದ ನನ್ನ ಶ್ರೀಮದ್ಗಾಂಭೀರ್ಯ ಹೆಚ್ಚುತ್ತದೆಂಬ ಅರಿವೋ ಅಂತೂ ಈಗ ಬಹುತೇಕ ನನ್ನೆಲ್ಲ ಕೆಲಸಕ್ಕೂ ನನ್ನ ಕಛೇರಿಯ ಈ ಗುಮಾಸ್ತನನ್ನೇ ಕಳಿಸುತ್ತೇನೆ. ಆತ ನನ್ನ ಹಾಗಲ್ಲ, ಯುವಕ, ಠಾಕುಠೀಕಾಗಿ ಡ್ರೆಸ್ ಮಾಡಿಕೊಂಡು ಬರುವಾಗ ನೋಡಿದವರ ಎದೆ ಝಲ್ಲೆನ್ನಬೇಕು. ಆ ಮಹಾರಾಯ ಬ್ಯಾಂಕಿಗೆ ಹೋದಾಗ ಅಲ್ಲಿನ ಕ್ಲರ್ಕ್‌ಗೆ ಪಾಸ್ ಪುಸ್ತಕ ನೀಡಿ ಆತ ವಿಳಂಬಿಸುವ ಸೂಚನೆ ಕಂಡ ಕೂಡಲೇ 'ಇದು ಲಾಯರದ್ದು; ಅವರು ಈ ಬ್ಯಾಂಕಿನ ಲಾಯರು; ಬೇಗ ಕೊಡಬೇಕೆಂದು ಹೇಳಿದ್ದಾರೆ. ತಡಮಾಡಿದರೆ ಅವು ಸಿಟ್ಟು ಮಾಡ್ತಾರೆ' ಎಂದನಂತೆ. ಕ್ಲರ್ಕ್ ಥಟ್ಟನೆ ಗಡಿಬಿಡಿಮಾಡಿ ದಡಬಡನೆ ಎಂಟ್ರಿ ಹಾಕಿ ಕೊಟ್ಟನಂತೆ. ಆನಂತರ ನನ್ನ ಎಲ್ಲಾ ಕೆಲಸವನ್ನೂ ಈ ನನ್ನ ಚಿತ್ರಗುಪ್ತನೇ ಪೂರೈಸಿ ಬರುತ್ತಾನೆ. ಅವನ ಕೆಲಸ ಅಷ್ಟು ಬೇಗ ಆಗುವುದು ಅವನು ನನ್ನನ್ನು ಯಮರಾಯನಂತೆ ಚಿತ್ರಿಸಿದ್ದರಿಂದಲೇ ಇರಬಹುದೆಂದು ನನ್ನ ತರ್ಕ. ಹೇಗಿದೆ ನನ್ನ ನಾಮದ ಬಲ!

ಇನ್ನು ಕೆಲವು ಸಲ ಯಾರದ್ದೋ ಹೆಸರು ನಿಮಗೆ ಪ್ರಯೋಜನಕ್ಕೆ ಬರುತ್ತದೆ. ಏನೂ ಗೊತ್ತಿಲ್ಲದೆ ಪೋಲೀಸು ಸ್ಟೇಷನ್ನಿಗೆ ದೂರು ಕೊಡುವುದಕ್ಕೆ ಹೋಗಿ; ಅಲ್ಲಿ ಎಲ್ಲರೂ ನಿಮ್ಮನ್ನು ಕೆಕ್ಕರುಗಣ್ಣಿನಿಂದ ನೋಡುತ್ತಾರೆ. ನೀವು ಕಾಣಬೇಕಾದ ಇನ್ಸ್‌ಪೆಕ್ಟರ್ ಒಳಗೆ ತನ್ನ ಛೇಂಬರಿನಲ್ಲಿ ಕಾಲುಗಳನ್ನು ನೀಳವಾಗಿ ಚಾಚಿ ಕುರ್ಚಿಯ ಮೇಲ್ತುದಿಯಿಂದ ನೆಲದ ವರೆಗೆ ಸರಳರೇಖೆಯಂತೆ ಮಲಗಿದ್ದರೂ ಹೊರಗಿರುವ ಕನಿಷ್ಠ ಪಿಲ್ಲೆ 'ಸಾಹೇಬರಿಗೆ ಬಿಡುವಿಲ್ಲ ಆಮೇಲೆ ಬನ್ನಿ' ಎನ್ನುತ್ತಾನೆ. 'ಬನ್ನಿ' ಎನ್ನಬೇಕಾದರೆ ನಿಮ್ಮ ಬಟ್ಟೆ ಬರೆ ಶ್ರೀಮಂತವಾಗಿರಬೇಕು; ನಿಮ್ಮ ಮಾತಿನಲ್ಲಿ ಸ್ವಲ್ಪ ಇಂಗ್ಲೀಷ್ ಬೆರೆತಿರಬೇಕು. ಇಲ್ಲವಾದರೆ 'ಬಾ' ಎಂಬುದೇ ಪ್ರಶಸ್ತವು. ನಿಮಗೆ ಪರಿಚಯದ ಕನಿಷ್ಠ ಪಿಲ್ಲೆ ಅಲ್ಲಿದ್ದರೆ ನಿಮ್ಮ ಕೆಲಸ ಸುಗಮ. ಅವನು ಥಟ್ಟನೇ ಒಳಗೆ ಹೋಗಿ ನಿಮಗೆ ಕೇಳುವಂತೆ ಇನ್ಸ್ಪೆಪೆಕ್ಟರ್ ಕಿವಿಯಲ್ಲಿ ಗುಟ್ಟಾಗಿ 'ಸಾರ್ ಅವರು...

ಸಾರ, ಬಹಳ ಪರಿಚಯಸ್ಥರು' ಎನ್ನುತ್ತಾನೆ. ಹಾಗೆ ಹೇಳಿದಾಗ ನಿಮಗೆ ಸಂದರ್ಶನದ ಪುಕ್ರದೆಸೆ ಆರಂಭವಾಗುತ್ತದೆ. ಆಗ ನೀವು ಮೊದಲೇ ಪಡೆದ ಮಾಹಿತಿಯಂತೆ 'ನಿಮಗೆ ನಮ್ಮ ಫ್ರೆಂಡ್... ರವರು ಗೊತ್ತಾ?' ಎಂದು ಕೇಳಿ. ಓಹೋ, ಅವರು ನನ್ನ ಕ್ಲಾಸ್‌ಮೇಟ್ ಎಂದು ಖುಷಿಯಲ್ಲಿ ಮಾತನಾಡಿಸಿದರೋ ನಿಮ್ಮ ಕೆಲಸ ಆಗುತ್ತದೆ. ಆ ಅನಾಮಿಕ ಗೆಳೆಯ ನಿಮ್ಮ ಕೆಲಸ ಮಾಡಿಕೊಟ್ಟ ಹಾಗಾಯಿತು. ಎಲ್ಲ ನಾಮದ ಮಹಿಮೆ!

ಕನಿಷ್ಠಬಿಲ್ಲೆ ಎಂದಾಗ ಜ್ಞಾಪಕವಾಯಿತು. ಅವರಿಗೆಲ್ಲ ಒಂದೊಂದು ನಂಬರ್ ಇದೆ. ಅವರ ಮೇಲಧಿಕಾರಿಗಳೆಲ್ಲ ಅವರನ್ನು ಈ ನಂಬರಿನಲ್ಲೇ ಕರೆಯುತ್ತಾರೆ. ಉದಾಹರಣೆಗೆ: ಪಿ.ಸಿ. 67, ಎರಡು ಕಾಫಿ ತೊಗೊಂಡ್ಬಾ, ಪಿ.ಸಿ. 112, ಕಾನ್ವೆಂಟಿಗೆ ಹೋಗಿ ನನ್ನ ಮಗನನ್ನ ಕರ್ಕೊಂಡ್ಬಾ, ಇತ್ಯಾದಿ. ಇನ್ನು ಕೆಲವು ಬಾರಿ 'ಯೇ ಇವನೇ ಬಾ ಇಲ್ಲಿ' ಎನ್ನುತ್ತಾರೆ. ಹತ್ತಿರ ಬಂದು 'ಏನ್ಸಾರ್?' ಎಂದು ಕೇಳಿದರೆ 'ಆ ಫ್ಯಾನ್ ಸ್ವಿಚ್ ಹಾಕು' ಎನ್ನುತ್ತಾರೆ. ಈ ಕ್ರಮ ಎಷ್ಟು ಸತತವಾಗಿದೆಯೆಂದರೆ ಅನೇಕ ಪಿ.ಸಿ.ಗಳಿಗೆ ತಮ್ಮ ಹೆಸರನ್ನು ಕರೆದರೆ ಗೊತ್ತೇ ಆಗುವುದಿಲ್ಲ. It's a game of numbers!

ಕೆಲವು ಮತದ ಹೆಂಗಸರಿಗೆ ಗಂಡನ ಹೆಸರು ಹೇಳಬಾರದೆಂಬ ವಾಡಿಕೆಯಿದೆ. ಅದರ ಬದಲಿಗೆ ಸೂಚಕಗಳನ್ನು ಇಟ್ಟುಕೊಳ್ಳುವವರಿದ್ದಾರೆ. 'ಅವರು', 'ಯಜಮಾನ್ರು' ಇತ್ಯಾದಿ ತದ್ಭವಗಳನ್ನು ಉಪಯೋಗಿಸುವುದು ಇಂತಹ ಪರ್ಯಾಯ 'ಹೆಸರು' ಕೃಷಿಯ ವಿಧಾನ. ಮಂಗೇಶರಾಯರ ಮನೆಗೆ ಜನಗಣತಿಯವರು ಬಂದರಂತೆ. ಮಂಗೇಶರಾಯರು ಇರಲಿಲ್ಲ. ಅವರ ಪತ್ನಿ ಇದ್ದರು. ಆಕೆಯೋ ಮಹಾ ಪತಿವ್ರತೆ. ಸೆರಗನ್ನು ತಲೆಗೆ ಸುತ್ತಿ ನೆಲ ನೋಡುತ್ತ ಮಾತನಾಡಿದಳು. ನಿಮ್ಮ ಗಂಡನ ಹೆಸರೇನಮ್ಮಾ? ಆಕೆ ಹೇಳಳು. ಬರೆದುಕೊಡಿ ತಾಯಿ ಎಂದ ಆತ. ಆಕೆಗೆ ಬರಹವಿಲ್ಲ. ಒಳ್ಳೇ ಗ್ರಹಚಾರವೆಂದು ಆತ ಯೋಚಿಸಬೇಕಾದರೆ ಆ ಸಾಧ್ವಿ ಒಗಟಿನಂತೆ ಹೇಳಿದ್ದು ಹೀಗೆ: 'ಮರದಿಂದ ಮರಕ್ಕೆ ಹಾರುವುದನ್ನು ಹೇಳಿ; ಶ ಸೇರಿಸಿ; ನಂತರ ರಾಯರು ಎಂದು ಹೇಳಿ.' ಹೇಗಿದೆ?

ಒಮ್ಮೊಮ್ಮೆ ವ್ಯಕ್ತಿಯ ಆಕಾರ ಮತ್ತಿತರ ಲಕ್ಷಣಗಳನ್ನು ಹೆಸರಿನ ಬದಲು ಉಪಯೋಗಿಸುವುದಿದೆ. ಅಷ್ಟೆತ್ತರದ ಕುವೆಂಪು ಅವರ ಹೆಸರು ಪುಟ್ಟಪ್ಪ ಅಂತ. ಬಿ. ಡಿ. ಜತ್ತಿ ಅವರ ಹೆಸರಿನ ಜತ್ತಿ ಅಂದರೆ ಜಟ್ಟಿ ಅಂತ. ಇದನ್ನು ಕುವೆಂಪು ಮತ್ತು ಜತ್ತಿ ಅವರು ಭಾಗವಹಿಸಿದ್ದ ಒಂದು ಸಮಾರಂಭದಲ್ಲಿ ಸ್ವತಃ ಕುವೆಂಪು ಅವರೇ ಹೇಳಿ ನಕ್ಕರಂತೆ. ಕೇಳಿದ ಮಂದಿಯೂ ನಕ್ಕರು. ಸ್ವತಃ ಜತ್ತಿಯವರೂ ನಕ್ಕರು. ಹೆಸರು ನಿರಾಕಾರ. ಆದ್ದರಿಂದ ಆಕಾರಕ್ಕೂ ಹೆಸರಿಗೂ ಸಂಬಂಧ ಹುಡುಕುವುದು ತಪ್ಪು. ವರ್ಣಾಶ್ರಮ ಧರ್ಮವನ್ನು ಮನುವು ಪ್ರಚುರಪಡಿಸಿದಾಗ ಅವನಿಗೆ ಈ ಬಣ್ಣದ ಮಹಿಮೆ ಗೊತ್ತಿದ್ದಿರಲಿಕ್ಕಿಲ್ಲ. ತನ್ನ ಕಛೇರಿಗೆ ಬರುವವರು ಇತರರನ್ನು ನನ್ನಲ್ಲಿ

ಪರಿಚಯ ಹೇಳುವುದು ಹೀಗೆ: 'ಸಾರ್, ಆ ಬೆಳ್ಳಗಿನವರೊಬ್ಬರು....' ಅಥವಾ 'ಇನ್ನೊಬ್ಬರು ತೆಳ್ಳಗಿನವರು ಇಲ್ಲಿದ್ದರಲ್ಲ... ಅಥವಾ 'ಆ ಕುಳ್ಳಗೆ ಒಬ್ಬರಿದ್ದಾರಲ್ಲ....' ಅಥವಾ 'ಆ ಡಾರ್ಕ್ ಆಗಿದ್ದಾರಲ್ಲ ಅವರು 'ನನ್ನಲ್ಲೊಬ್ಬಾಕೆ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುವವಳು ಅವಳನ್ನು 'ಸಾರ್, ಆ ಸ್ವಲ್ಪ ಶಾರ್ಟ್ ಆಗಿದ್ದಾರಲ್ಲ, ಅವರು...' ಎಂದು ಅನೇಕರು ಪರಿಚಯ ಹೇಳುತ್ತಿದ್ದರು. ಮೊನ್ನೆ ಮೊನ್ನೆ ಆಕೆ ಕನ್ನಡಕ ಹಾಕಲು ಶುರು ಮಾಡಿದಳು. ಇದರ ನಂತರ ಪರಿಚಯಕ್ಕೆ ಹೊಸ ಮುಖ ಹುಟ್ಟಿತು. 'ಸಾರ್ ಆ ಗಾಂಧಿ ಕನ್ನಡಕ ಹಾಕ್ತಾರಲ್ಲ ಅವರು...' ಎಂದು ಕೇಳುವುದು ರೂಢಿಯಾಯಿತು. ನನ್ನನ್ನು ಜನ ಏನು ಹೇಳುತ್ತಾರೋ. ನನಗಿನ್ನೂ ಗೊತ್ತಾಗಿಲ್ಲ.

ಸ್ಥಳೀಯ ಕಾಲೇಜಿಗೆ 'ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು' ಎಂದು ಹೆಸರು. ಇದು ಖ್ಯಾತ ಸೇನಾನಾಯಕರೊಬ್ಬರಿಗೆ ನೀಡಿದ ಗೌರವ. ಆದರೆ ಅಷ್ಟೊಂದು ಎತ್ತರದ ವ್ಯಕ್ತಿತ್ವವನ್ನು ಅಷ್ಟು ಉದ್ದ ಬರೆಯುವವರು ಯಾರು? ಪರಿಣಾಮವಾಗಿ ಎಲ್ಲಾ ಪತ್ರಗಳಲ್ಲಿ ಈ ವಿಳಾಸ 'ಫೀ.ಮಾ.ಕೆ.ಎಂ.ಕಾ.ಕಾಲೇಜು'. ಎಂದಿಷ್ಟೇ ಇದೆ. ನಿಧಾಕ್ಕೆ ಇದು 'ಫೀ.ಮಾ.ಕೆ.ಎಂ.ಕಾ.ಕಾ.' ಎಂದು ಬದಲಾಗಬಹುದು. ಬಹಳ ಗೌರವಪೂರ್ವಕವಾಗಿ ಮಹಾತ್ಮನ ನೆನಪಿಗೆ 'ಮಹಾತ್ಮ ಗಾಂಧಿ ರಸ್ತೆ' ಎಂದು ಹೆಸರಿಟ್ಟರೆ ಅದು 'ಎಂ.ಜಿ. ರಸ್ತೆ'ಯಾಗುತ್ತದೆ. ಮಡಿಕೇರಿಯಲ್ಲಿ ಹಿಂದೆ ಸೆಂಟ್ರಲ್ ಹೈಸ್ಕೂಲು ಇದ್ದದ್ದು. 'ಸರ್ಕಾರಿ ಪದವಿ ಪೂರ್ವ ಕಾಲೇಜು' ಅರ್ಥಾತ್ 'ಸ.ಪ.ಪೂ.ಕಾಲೇಜು' ಆಗಿದೆ. ಅಲ್ಲಿಗೆ ಹೋಗುವ ರಸ್ತೆಗೆ 'ಸ್ಕೂಲ್ ರಸ್ತೆ' ಎಂದೇ ಹೆಸರು. ಈಚೆಗೆ ದಿವಂಗತ ಪಂಜೆ ಮಂಗೇಶರಾವ್ ಅವರ 125ನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಅದಕ್ಕೆ 'ಪಂಜೆ ಮಂಗೇಶರಾವ್ ರಸ್ತೆ' ಎಂದು ಹೆಸರಿಟ್ಟರು. ಒಂದೆರಡು ವರುಷಗಳಲ್ಲೇ ಇದು 'ಪಿ.ಎಂ.ಆರ್. ರಸ್ತೆ' ಎಂದು ಬರೆವ ವಾಸ್ತವರೂ ಇದ್ದಾರೆ. ಅದು Prime Minister's Rozgar Road ಆಗದಿದ್ದರೆ ಸಾಕು.

ನಮ್ಮ ಸ್ನೇಹಿತರೊಬ್ಬರು ಊರಿನಲ್ಲಿ 'ಮಮ್ಮುಂಞ' ಎಂದೇ ಖ್ಯಾತರು. ಅವರ ಹೆಸರು 'ಮಹಮ್ಮದ್' ಎಂದಿದ್ದಿರಬೇಕು, ಅದು ಯಾರಿಗೂ - ಅವರಿಗೂ ಗೊತ್ತಿಲ್ಲ. ಅವರು ಮಕ್ಕಾಯಾತ್ರೆ ಕೈಗೊಂಡರು. ಹೋಗಿ ಬಂದ ನಂತರ ಊರಲ್ಲಿ ಅದ್ದೂರಿಯ ಔತಣವನ್ನು ನೀಡಿದರು. ಆಮಂತ್ರಣದಲ್ಲೂ ಚಿನ್ನದ ಮೆರುಗಿನ ಅಕ್ಷರದಲ್ಲಿ 'ಮಹಮ್ಮದ್ ಹಾಜೀ' ಎಂದು ಬರೆಸಿದ್ದರು. ಅವರಲ್ಲಿ ಬಹಳ ಜನ ಸೇರಿದರು. ಆದರೆ ಅವರ ಅದೃಷ್ಟ ನೋಡಿ! ಹೋಗುವವರೂ ಬರುವವರು 'ಎಲ್ಲಿಗೆ ಹೋಗ್ತೀರಿ' ಎಂದರೆ 'ಮಮ್ಮುಂಞಯವರಲ್ಲಿಗೆ' ಎಂದೇ ಬಹಳ ಅತಿಥಿಗಳು ಹೇಳಿದ್ದು.

ರಾತ್ರಿಗೆ ಬೆಂಗಳೂರಿನಲ್ಲಿ ಯಾವುದೋ ಒಂದು ವಿಳಾಸ ಹುಡುಕುತ್ತ ಹೋದೆ. ಅದು 'ಎ.ಎಂ.ರಸ್ತೆ' ಎಂದಿತ್ತು. ಹಾಗೂ ಹೀಗೂ ಜೆ.ಸಿ. ರಸ್ತೆಯ ಬಳಿ ಯಾರ್ಯಾರಲ್ಲೋ ಕೇಳಿ ಆ ರಸ್ತೆಯಲ್ಲಿ ನನಗೆ ಬೇಕಾದ ಸ್ಥಳಕ್ಕೆ ಹೋದೆ. ಅಕಡೆಮಿಕ್ ಆಸಕ್ತಿಗಾಗಿ 'ಎ.ಎಂ. ರಸ್ತೆ' ಎಂದರೇನು ಎಂದು ಹಲವರಲ್ಲಿ ಕೇಳಿದೆ. ಅದೇ ಹೆಸರಿನ ಬೋರ್ಡ್, ಲೆಟರ್ ಹೆಡ್ ಹಾಕಿಕೊಂಡವರಲ್ಲಿ ಕೇಳಿದೆ; ಆಟೋ ಡ್ರೈವರುಗಳಲ್ಲಿ ಕೇಳಿದೆ. ಬಹಳ ಜನ ತಿಳಿಯದೆಂದರು. ಕೊನೆಗೆ ಒಬ್ಬ ಇಳಿವಯಸ್ಸಿನ, ಹಣೆಗೆ ವಿಭೂತಿ - ಕುಂಕುಮ ಹಚ್ಚಿದ ಆಟೋ ಡ್ರೈವರ್‌ನಲ್ಲಿ ವಿನೀತನಾಗಿ ವಿಚಾರಿಸಿದೆ. ಆತನು ಮೊದಲು ತಿಳಿಯದೆಂದರೂ ನಂತರ 'ಇರಿ' ಎಂದ. ತನ್ನ ಗಾಢ ವಿಶಾಲ ಅನುಭವವನ್ನು ಅದರಾಚೆಗಿನ ನೆನಪುಗಳನ್ನು ಮೆಲುಕು ಹಾಕಿ ಹಾಂ, ಈಗ ನೆನಪಾಯಿತು, ಅದು ಹಿಂದೆ ಒಬ್ಬರು 'ಆರ್ಮುಗಮ್ ಮುದಲಿಯಾರ್' ಎಂಬವರಿದ್ದರು ಅವರು ದೊಡ್ಡ ದಾನಿಗಳು; ಅವರ ಹೆಸರಿಗೆ ಈ ರಸ್ತೆ, ಈ ನಸ್ಮಕ್ಕಿಗೆ ಎಲ್ಲಿ ಗೊತ್ತಿರುತ್ತೆ ಇದು' ಎಂದ. ಅವನು ಹೇಳಿದ್ದು ಸರಿಯೋ ತಪ್ಪೋ ತಿಳಿಯದು. ಆದರೆ ಅವನು ಸೂಚಿಸಿದ ಹೆಸರು 'ಎ.ಎಂ.' ಎಂಬುದಕ್ಕೆ ತಾಳೆಯಾಗುತ್ತಿತ್ತು. ಸಮಾಧಾನವೋ ಸುಸ್ತೋ ಅಂತೂ ಆ ಹೆಸರನ್ನು ಹೊತ್ತು ಹಿಂತಿರುಗಿದೆ.

ಇವರು 'ಹೆಸರಾಂತ' ಸಾಹಿತಿ ಎನ್ನುತ್ತಾರೆ. 'ಅಂತ' ಎಂದರೆ ಅಂತ್ಯ ಎಂದಾದರೆ 'ಹೆಸರು ಅಂತ್ಯಗೊಂಡ' ಎಂಬ ಗೂಢಾರ್ಥದಲ್ಲಿ ಹೇಳುತ್ತಾರೆಯೇ ಎಂಬ ಸಂಶಯ ನನಗುಂಟಾಗಿದೆ. 'ಪಾತಕನ ಹೆಸರು ಮೂರು ಲೋಕದೊಳಗೆ ಯಾತಕ್ಕು ಬೇಡ' ಎನ್ನುತ್ತಾರೆ. ಸಾರ್ವಜನಿಕ ಸಮಾರಂಭದಲ್ಲಿ ಪರಿಚಯ ಮಾಡುವಾಗ 'ಇವರು ಎಲ್ಲರಿಗೂ ಪರಿಚಿತರು' ಎನ್ನುವುದನ್ನು 'ಹೆಸರುವಾಸಿ' ಎನ್ನುತ್ತಾರೆ. ನಮ್ಮಲ್ಲೊಬ್ಬರು ಆಂಗ್ಲ ಭಾಷಾ ವ್ಯಾಮೋಹಿ ಒಬ್ಬ ಅತಿಥಿಯನ್ನು ಪರಿಚಯಿಸುತ್ತಾ "He is a very popular figure ಎಂದರು. ನಂತರ ಅವರ ಪರಿಚಯ ಎಲ್ಲರಿಗೂ ಇರುವುದರಿಂದ ಹೆಚ್ಚು ಹೇಳುವುದಿಲ್ಲ ಎಂದು ಹೇಳಿ ತನ್ನ ಇಂಗ್ಲೀಷಿನಲ್ಲಿ less said better ಎಂದರು.

ಮಾತಿನ ಅಥವಾ ಪದ್ಯದ ಸಾಲುಗಳಲ್ಲೂ ಅಷ್ಟೇ: ಅಂತ್ಯಪ್ರಾಸದ ಸಂದರ್ಭ ದಲ್ಲಿ 'ಹೆಸರು' ಎಂದ ಪದ 'ಉಸಿರು, ಕೆಸರು, ಮೊಸರು, ಬಸಿರು, ಹಸಿರು' ಮುಂತಾದ ಪದಗಳು ಬಂದಲ್ಲೆಲ್ಲ ಧೂಮಕೇತುವಿನಂತೆ ಧಾವಿಸುವುದಿದೆ.

ಪರಂಪರೆಯನ್ನು ಉಳಿಸುವುದಕ್ಕೆ, ಪ್ರಯೋಗವನ್ನು ಅಜರಾಮರ ಗೊಳಿಸುವುದಕ್ಕೆ, ಸಾಧನೆಗಳನ್ನು ಶಾಶ್ವತಗೊಳಿಸುವುದಕ್ಕೆ ಹೆಸರು ಪರಿಣಾಮಕಾರಿ ಸಾಧನ, 'ಅಮೇರಿಗೋವೆಸ್ಪುಸಿ' ಕಂಡು ಹಿಡಿದ ಖಂಡಕ್ಕೆ 'ಅಮೇರಿಕಾ' ಎಂದು ಹೆಸರು. ಭರತನಿಂದ ನಮ್ಮ ದೇಶಕ್ಕೆ 'ಭಾರತ' ಎಂದು ಹೆಸರಾಗಲಿಲ್ಲವೇ ಹಾಗೆ.

'ಕೊಹಾಟೆಕ್' ಎಂಬ ಧೂಮಕೇತುವಿಗೆ ಅದೇ ಹೆಸರು ಯಾಕೆ? ಅದನ್ನು ಕಂಡುಹಿಡಿದ ವಿಜ್ಞಾನಿಯ ಹೆಸರು ಅದು. ಆತ ಮನೆಯಲ್ಲಿ ವಿಪರೀತ ಸಿಗರೇಟು ಸೇದುತ್ತಿದ್ದರೆ, ಅದರ ಗುಂಗುರು ಹೊಗೆಯನ್ನು ಆತ ಉದ್ದಕ್ಕೂ ಬಾಚುತ್ತಿದ್ದರೆ, ಆತನನ್ನು ಧೂಮಕೇತು ಎಂದೇ ಕರೆಯಬಹುದು.


ನಮ್ಮ ಅನೇಕ ಪ್ರಶಸ್ತಿಗಳ ಹೆಸರುಗಳೇ ಯಾರಿಗೂ ನೆನಪಾಗದು. ಹೆಸರಿನ ಪ್ರಶಸ್ತಿ ಯಾರಿಗೂ ಬೇಡ. ಪ್ರಶಸ್ತಿಯಿಂದ ಹೆಸರು ಬರುತ್ತದಲ್ಲ! ಅವು ಮೈಲುದ್ದವಿರುತ್ತವೆ. ರಾವ ಬಹದ್ದೂರ... ಇವರು ತಮ್ಮ ಅಗಲಿದ ಪತ್ನಿ ಹ.ಕು.ಶೋ... ಇವರ ಸ್ಮಾರಕಾರ್ಥ ನೀಡಿದ ಬಹುಮಾನ ಎಂದಿರುತ್ತದೆ. ಇಷ್ಟಾದರೂ ಪ್ರತೀ ಪ್ರಶಸ್ತಿಗೂ ಹೆಸರಿರುತ್ತದೆ. ಪ್ರಶಸ್ತಿ ನೀಡಿದವರೂ ಮತ್ತು ವಿಜೇತರೂ ಅಷ್ಟೆ: ತಮ್ಮ ಹೆಸರನ್ನೂ ಈ ಬಿರುದುಬಾವಲಿಗಳ ಸಹಿತ ಹೇಳಬೇಕೆಂದು ಬಯಸುತ್ತಾರೆ.

ಅನೇಕ ಸಾರ್ವಜನಿಕ ಕಟ್ಟಡಗಳಲ್ಲಿ, ಶಾಲೆ ಮತ್ತಿತರ ಸಂಸ್ಥೆಗಳಲ್ಲಿ ದಾನಿಗಳ ಹೆಸರನ್ನು ಕೆತ್ತುವ ಸಂಪ್ರದಾಯವಿದೆ. ಅಮೃತಶಿಲೆಯಲ್ಲಿ ಇವು ಕಂಗೊಳಿಸುತ್ತವೆ. 'ಹಲ್ಮಿಡಿ ಶಾಸನ' ಕನ್ನಡದ ಮೊದಲ ಅಂತಹ ಶಾಸನವಾದರೆ, ಇಪ್ಪತ್ತನೆಯ ಶತಮಾನದಲ್ಲೇ ಇಂತಹ ಲಕ್ಷಾಂತರ ಶಾಸನಗಳು ಕೆತ್ತಲ್ಪಟ್ಟಿವೆ. ಕೆಲವು ಬಾರಿ ದಾನಿಗಳು ನೀಡಿದ ಅಷ್ಟೂ ಹಣ ಈ ಹೆಸರು ಕೆತ್ತುವುದಕ್ಕೇ ವ್ಯಯವಾಗುತ್ತದೆ. ಅದನ್ನು ನೋಡಿದರೆ 'ನಿನ್ನ ದಾನವನುಂಡು ಅನ್ಯರ ಪೊಗಳುವ...' ಎಂಬ ವಚನ ಥಟ್ಟನೇ ಎದೆಯನ್ನೊದ್ದುಕೊಂಡು ಬರಬೇಕು. ನಮ್ಮೂರಿನ ಖ್ಯಾತ ದಾನಿಯೊಬ್ಬರು ದೇವಾಲಯವೊಂದರ ಮಹಾದ್ವಾರವನ್ನು ಕಟ್ಟಿಸಿದ್ದಾರೆ. ಅಲ್ಲಿ ದೊಡ್ಡಕ್ಷರಗಳಲ್ಲಿ '...ಲ್ಲಿನ ಶ್ರೀ ... ಮತ್ತು ಅವರ ಧರ್ಮಪತ್ನಿ ಶ್ರೀಮತಿ... ಇವರ ಮತ್ತು ಮಕ್ಕಳ ಹಾಗೂ ಕುಟುಂಬಸ್ಥರ ಭಕ್ತಿಪೂರ್ವಕ ಸೇವೆ' ಎಂದೂ ಈ ಫಲಕದ ಕೆಳಗೆ ಚಿಕ್ಕ ಅಕ್ಷರಗಳಲ್ಲಿ '.... ದೇವಾಲಯದ ಮಹಾದ್ವಾರ' ಎಂದು ಕೆತ್ತಲಾಗಿದೆ. ದೇವರು 'ಮಹಾ' ಅಲ್ಲದಿದ್ದರೂ ದಾನಿಗಳಂತು 'ಮಹಾ'ನುಭಾವರು ಹೌದಲ್ಲ!

ಹೇಳುತ್ತ ಹೋದರೆ ಹೆಸರಿನ ಇತಿಹಾಸಕ್ಕೆ ಬರಗಾಲವಿಲ್ಲ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ಮತ್ತು ಹಿಟ್ಟಿಗಾಗಿ' ಎಂದರು ದಾಸರು. ಇದಕ್ಕೇ ಒಂದು ಸಾಲು 'ಮತ್ತು ಹೆಸರಿಗಾಗಿ' ಎಂದು ಸೇರಿಸಿದರೇನಂತೆ?

ಭಗವಂತನ ನಾಮಾವಳಿ ಬಹಳಷ್ಟಿದೆ. ಶತ, ಸಹಸ್ರ ಹೀಗೆ. ನಾಮದ ಹಾವಳಿ ಎಷ್ಟೆಂದು ಈಗ ಗೊತ್ತಾಗಿರಬಹುದು. ಈಗ ಹೇಳಿ 'ಹೆಸರಿನಲ್ಲೇನಿದೆ?'

ಹೆಸರಿನಲ್ಲೇ ಎಲ್ಲವೂ ಇದೆ, ಅಲ್ಲವೇ?



ಸ್ವಾಸ್ಥ್ಯ...
ಮೊದಲೇ ಜನಕ್ಕೆ ನನ್ನ ಭಾಷಣಾ ಅರ್ಥ ಆಗ್ತಿರಲಿಲ್ಲ.... ಇನ್ನು- ಈಗ....
ಚೈನಾ ವಾಚ್, ಚೈನಾ ರೇಡಿಯೋ ಚೈನಾ ಟೇಪ್...
ಪ್ರತಿಯೊಂದೂ ಚೀನಾದ್ದೇ ಬೇಕೂಂತಿದ್ವಿ....
ಈಗ ರೋಗ ವೂ ಚೀನಾದ್ದೇ ತಗುಲಿದೆಯಂತೆ...

ಪಡ್ಡೆಗಳ ಹಾಡು

- ಹೆಚ್. ಗೋಪಾಲಕೃಷ್ಣ


ಕಂಗಳಿದ್ಯಾತಕೋ ಕ್ಯಾಬರೆ ಡ್ಯಾನ್ಸನು ನೋಡದಾ
ಜಗಂಗಳೊಳಗೆ ಸುರಸುಂದರ ಮೂರುತಿ ಯುವತಿ
ರಂಗಿಯ ವೈಯಾರವಾ ನೋಡದಾ...

ಎಂದೆಂದಿಗೂ ಜನರು ಬಂದು
ಬಾರಿನಲಿ ನಿಂದು 'ಸ್ನಾನವ' ಮಾಡಿ ಮತ್ತಿನ
ಆನಂದದಿಂದಲಿ ರಂಗಿಯ ನೋಡದ...

ಸೋಮಪಾದೋದಕ ಆರ್‌ಸೀ ಇತ್ಯಾದಿ
ಪಾನೀಯಗಳಲಿ ಈಜ ಮಾಡಿ
ಪರಮ ವೈಕುಂಠ ರಂಗಮಂದಿರ
ಪರ ರಂಗಿಯ ನೋಡದಾ...

ಹಾರ ಹೀರ ವೈಜಯಂತಿ
ತೋರ ಮುತ್ತಿನ ಸರವ ಧರಿಸಿ
ತುಂಡು ಉಗದಲಿ ರಂಗದ 'ತುಂಬು' ತುಂಬಿ ಹಾರಿ ಹಾರಿ ಹಾರಿ
ಕುಣಿವ ರಂಗಿಯ ನೋಡದ...

(ದಾಸರು, ಸನಾತನಿಗಳು ಖಂಡಿತ ಕ್ಷಮಿಸತಕ್ಕದ್ದು)



ಯಾರು ಯಾರಿಗೆ ಯಾವಾಗ ಹೇಳಿದರು

– ಆರತಿ

1. **ಶುಭನುಡಿಯೇ ಶಕುನದ ಪಕ್ಕಿ ಶುಭನುಡಿಯೆ**

(ಅ) ಡೊನಲ್ಡ್ ರಮ್ಸ್ ಫಿಲ್ಡ್ ಇರಾಕ್ ಯುದ್ಧಕ್ಕೆ ಮುಂಚೆ
(ಆ) ಅಬೂ ಮಾಸನ್, ಏರಿಯಲ್ ಷರಾನ್ ಜೊತೆಗಿನ ಭೇಟಿಗೆ ಮುಂಚೆ
(ಇ) ಬೇಂದ್ರೆ ಕವನ

2. **ಯಾರಿಗೂ ಹೇಳೋಣು ಬ್ಯಾಡ**

(ಅ) ವಾಜಪೇಯಿ, ಶಾಂತಿಯತ್ನದ ಬಗ್ಗೆ ಜಮಾಲಿಗೆ ದೂರವಾಣಿಯಲ್ಲಿ
(ಆ) ಜಯಲಲಿತಾ, ಎಸ್.ಎಮ್. ಕೃಷ್ಣರಿಗೆ ವೀರಪ್ಪನ್ ಬಗ್ಗೆ
(ಇ) ಬೇಂದ್ರೆ ಕವನ

3. **ನೆಲದ ಒಳ ಎದೆಯಿಂದ ಸುರಿಯುತಿದೆ, ಹರಿಯುತಿದೆ ತೊರೆಯುತಿದೆ ನೀರು!**

(ಅ) ಬಾಸ್ರಾದಲ್ಲಿ ಬ್ರಿಟಿಷ್ ಸೈನಿಕರು ಇರಾಕಿಗಳಿಗೆ ಕೊಟ್ಟ ಆಶ್ವಾಸನೆ
(ಆ) ಜಯನಗರದ ನಿವಾಸಿಗಳು ಒಡೆದ ನೀರಿನ ಕೊಳವೆ ಕುರಿತು ಜಲಮಂಡಳಿಗಿತ್ತ ದೂರು
(ಇ) ಬೇಂದ್ರೆ ಕವನ

4. **ನಾನು ಬಡವಿ ಆತ ಬಡವ**

(ಅ) ಉಮಾ ಭಾರತಿ ಗೋವಿಂದಾಚಾರ್ಯರ ಬಗ್ಗೆ ಮಾತನಾಡುತ್ತಾ
(ಆ) ಇಂಡೋ ಪಾಕ್ ಆರ್ಥಿಕ ಪರಿಸ್ಥಿತಿ ಕುರಿತು ಸೋನಿಯಾ
(ಇ) ಬೇಂದ್ರೆ ಕವನ

5. **ಶತ್ರು ನಿಗ್ರಹದ ಆಸಕ್ತಿಯಿಂದ ಕೂಡಿ, ಚಿನ್ನದ ಕಂಬದಂತಿರುವ ಈ ಬಲ ತೋಳೇ ನನಗೆ ತಕ್ಕ ಆಯುಧ**

(ಅ) ಸದ್ದಾಮ್, ತನ್ನ ಮಗ ಉದಯ್ ಜೊತೆ ಮಾತನಾಡುತ್ತಾ
(ಆ) ಮುಷರಾಫ್, ಅಲ್ ಖೈದಾ ಮುಖಂಡರೊಡನೆ ಗುಪ್ತ ಮಾತುಕತೆಯಲ್ಲಿ
(ಇ) ಬೀಮ, ಘಟೋತ್ಕಚನಿಗೆ, ಮಧ್ಯಮ ವ್ಯಾಯೋಗದಲ್ಲಿ

6. **ಈ ಶೈಲಕೂಟದಿಂದ ಅಪ್ಪಳಿಸುತ್ತೇನೆ**

(ಅ) ಲಲ್ಲೂ ಪ್ರಸಾದ್ ಯಾದವ್, ಇಂಡಿಯಾ ಟುಡೇ ಬಾತ್ಮೀದಾರನನ್ನು ಕುರಿತು
(ಆ) ಮಾಜಿ ಇರಾಕಿ ವಾರ್ತಾ ಸಚಿವ, ಅಲ್ ಸಹಾಫ್ ಅಮೆರಿಕನ್ನರನ್ನ ಕುರಿತು ವಾರ್ತಾ ಗೋಷ್ಠಿಯಲ್ಲಿ
(ಇ) ಘಟೋತ್ಕಚ, ಭೀಮನನ್ನು ಕುರಿತು ಮಧ್ಯಮ ವ್ಯಾಯೋಗದಲ್ಲಿ

More About ಸದ್ದಾಂ


- ವಿಜಯ ಸಚ್ಚಿದಾನಂದ

ಶಿವಕುಮಾರರ 'ನಮ್ಮ ನಮ್ಮಲ್ಲಿ' (ಏಪ್ರಿಲ್) ದಾಸನ ಬಾಗದಾದಿನ ಪ್ರಕರಣ ಓದಿ ಈ ಕೆಳಗೆ ಕಂಡ ಪ್ರಕರಣವೊಂದು ನೆನಪಿಗೆ ಬಂದಿತು. ಅಲ್ಲಿ ನಾವಿದ್ದದ್ದು 1980-1982 ರಲ್ಲಿ.

ಬಸ್ರಾದಲ್ಲಿ ಒಂದು ಸರದಾರಜಿ ಸಂಸಾರ. ದೆಹಲಿಯ ಸರ್ಕಾರಿ ಇಲಾಖೆಯೊಂದರಲ್ಲಿ draughtsman ಆಗಿದ್ದ ಆತ ಯಾವುದಾದರೂ ಸ್ವ ಉದ್ಯೋಗಕ್ಕೆ ಕೈ ಹಾಕಬೇಕೆಂಬ ಆಸೆ ಬಲವಾಗಿದ್ದ ಕಾರಣ ತನ್ನ ಹೆಂಡತಿ ಮಕ್ಕಳೊಂದಿಗೆ ಬಾಗದಾದಿಗೆ ಬಂದಿದ್ದ. ಸಾಕಷ್ಟು ಹಣ ಗಳಿಸಿದ ನಂತರ ತನ್ನ ತಾಯ್ನಾಡಿಗೆ ಮರಳುವ ಇಚ್ಛೆ ಅವನದ್ದು.

ಒಂದು ಶುಕ್ರವಾರದಂದು (ವಾರದ ರಜೆಯ ದಿನ) ಬೆಳಗ್ಗೆಯ ಸುಮಾರು 6-30 - 7ರ ಸಮಯ. ಸರದಾರಜಿ ಆರಾಮವಾಗಿ ಚಹಾ ಹೀರುತ್ತಾ ಕುಳಿತಿದ್ದಾನೆ. ಹೆಂಡತಿ ನಾಷ್ಟಾದ ತಯಾರಿ ನಡೆಸುತ್ತಿದ್ದಾಳೆ. ಇದ್ದಕ್ಕಿದ್ದಂತೆ ಆ ರಸ್ತೆಯಲ್ಲಿ ಏನೋ ಜೋರಾದ ಗಲಾಟೆ ಕೇಳಿಸಿತು. ಕುತೂಹಲ ತಾಳಲಾರದ ಸರದಾರ ಏನೋ ನೋಡೋಣಾಂತ ಬಾಲ್ಕನಿಗೆ ಬಂದರಂತೆ. ಅವರು ಕಂಡದ್ದೇನು! ಅವರ ಮನೆ ಮುಂದೆ ಸರ್ಕಾರಿ ಕಾರುಗಳ (Benz) ಲೈನು. ಸುಮಾರು ನಾಲ್ಕೈದಿರಬಹುದು. ಒಂದರಿಂದ ಖುದ್ದು ಸದ್ದಾಂ ಹುಸೈನ್ ಇಳಿದನಂತೆ. ಅವನ ಹಿಂದೆಯೇ ಕೆಲವು security ಯೋರಿರಬಹುದು ಇಳಿದರಂತೆ. ಇಳಿದವರೇ ಸೀದಾ ಇವನ ಮನೆಯ ತಲೆ ಬಾಗಿಲ ಕಡೆಗೆ ಬಂದರಂತೆ. ರಸ್ತೆಯೋರೆಲ್ಲಾ - ಮಕ್ಕಳು ಮುದುಕರು ಅನ್ನದೆ ಇವರನ್ನು ಹಿಂಬಾಲಿಸುತ್ತಿದ್ದಾರೆ. ಕೆಲವರು ಸದ್ದಾಂನ ಕೈ ಹಿಡಿದು ಕುಲುಕಲು ಪ್ರಯತ್ನಿಸುತ್ತಿದ್ದಾರೆ. ಅವನೂ ನಗುನಗುತ್ತಾ ಅಷ್ಟೇ ಪ್ರೀತಿಯಿಂದ ಅವರಿಗೆ ಪ್ರತಿಸ್ಪಂದಿಸುತ್ತಿದ್ದಾನೆ. ಇದನ್ನು ಕಂಡ ಸರದಾರಜೀಗೆ ಎದೆ ಡವಡವ ಗುಟ್ಟೋದಕ್ಕೆ ಶುರುವಾಯ್ತು. ಒಳಗೇ ಭೀತಿ ಉಂಟಾಯ್ತು. "ಇವತ್ತು ನನ್ನ ಗ್ರಹಚಾರ ಸರಿಯಾಗಿಲ್ಲ! ಏನೋ ಕಾದಿದೆ!" ಅಂತ ತನ್ನಲ್ಲಿ ತಾನೇ ಅಂದುಕೊಂಡ. ಅಂತಹ ಹಿರಿಯ ಅಧಿಕಾರಿ ತನ್ನ ಬಡ ಕುಟೀರಕ್ಕೆ ದಯಮಾಡಿಸಬೇಕಾದರೆ ತನಗೇ ಗೊತ್ತಿಲ್ಲದಂತೆ ತನ್ನಿಂದ ಏನೋ ಅಸಂಭವ ಸಂಭವಿಸಿದೆ ಅಂತ ಮನಸ್ಸಿನಲ್ಲಿ ವಾಹಿಗುರುವನ್ನು ನೆನೆಸುತ್ತಾ ಅಲ್ಲೆ stand ಮೇಲೆ ನೇತಾಡುತ್ತಿದ್ದ ಪ್ಯಾಂಟ್‌ನ ಎಳೆದು ಪೈಜಾಮದ ಮೇಲೆ ಹಾಕಿಕೊಂಡು - ಕೈಯಿಂದಾನೇ ಮೀಸೆ ಗಡ್ಡಾನೆಲ್ಲಾ ತೀಡಿ ಸರಿ ಮಾಡಿಕೊಂಡು ತಲೆ ಬಾಗಿಲು ತಲಪೋದಕ್ಕೂ ಸದ್ದಾಂ ಹುಸೈನ್

''ರಬ್ಬಾ ಖೈರ್'' ಅನ್ನುತ್ತಾ ಒಳಗಡೆ ಬರುವುದಕ್ಕೂ ಸರಿ ಹೋಯಿತಂತೆ. ಒಳ ನುಗ್ಗಿದವನು ತಾನೇ ಸಲುಗೆಯಿಂದ ಬಂದು ಸೋಫಾದ ಮೇಲೆ ಕುಳಿತುಕೊಂಡನಂತೆ. ಅಷ್ಟು informal ಆಗಿದ್ದ. ಅಷ್ಟು ಹೊತ್ತಿಗೆ ಹೊರಗಡೆ ಆಟ ಆಡುತ್ತಾಯಿದ್ದ ಇವನ ಮಕ್ಕಳು ಒಳಗಡೆ ಬಂದರಂತೆ. ಇವನನ್ನು ಮಿಕಿ ಮಿಕ ನೋಡ್ತಾ ನಿಂತುಕೊಂಡರಂತೆ. ಅವುಗಳ ತಲೆ ಮುಟ್ಟಿದ. ಕೆನ್ನೆ ಸವರಿ ನಸುನಕ್ಕು ಮಾತನಾಡಿಸಿದನಂತೆ. ನಂತರ ಸರದಾರಜಿಯ ಸುಖ ದುಃಖವನ್ನೆಲ್ಲಾ ಪ್ರೀತಿಯಿಂದ ವಿಚಾರಿಸಿದ. ''ಇಲ್ಲಿ ಸುಖವಾಗಿದ್ದೀಯಾ! ಏನೂ ಕೊರತೆಯಿಲ್ಲಾ ತಾನೇ! ಆಫೀಸಿನಲ್ಲಿ ಏನು ಕೆಲಸ ಮಾಡುತ್ತೀ ಅಂತೆಲ್ಲಾ ವಿಚಾರಿಸಿದ. ಸರದಾರನಿಗೆ ಅರಾಬಿಕ್ ಸುಮಾರಾಗಿ ಚೆನ್ನಾಗಿಯೇ ಬರ್ತಾಯಿತ್ತು. ''ಹುಜೂರ್'' ಇಲ್ಲಿಗೆ ಬಂದು ಎರಡು ವರ್ಷದ ಮೇಲಾಯ್ತು! ತಂದೆ ತಾಯಿಯರನ್ನು ಕಾಣುವ ಮನಸ್ಸಾಗಿದೆ! ಅವರಿಗೂ ವಯಸ್ಸಾಗಿದೆ ತಾಯ್ನಾಡಿಗೆ ರಜದ ಮೇಲೆ ಹೋಗಬೇಕೆಂದಿದ್ದೇನೆಂತ ತನ್ನ ಮನಸ್ಸಿನ ಬಯಕೆಯನ್ನೂ ತೋಡಿಕೊಂಡ. ಹಿರಿಯ ಅಧಿಕಾರಿಯಾದರೂ ಅಷ್ಟು ಮಟ್ಟಿನ ಸಲಿಗೆಯನ್ನು ಆಗಲೇ ಸಂಪಾದಿಸಿಕೊಂಡು ಬಿಟ್ಟಿದ್ದ ಸದ್ದಾಂ. ಅದಕ್ಕೆ ಸದ್ದಾಂ ''ಇನ್ಸ್ ಅಲ್ಲಾ!'' (ದೇವರ ಇಚ್ಛೆ) ಅಂತ respond ಮಾಡಿದ. ಅಷ್ಟು ಹೊತ್ತಿಗೆ ಮನೆಯೊಡತಿ ಒಂದು ತಟ್ಟೆ ತುಂಬಾ ಹಿಂದಿನ ದಿನ ತಾನೇ ತಯಾರಿಸಿದ ಬೇಸನ್ ಲಾಡು (ಅರಬ್ಬೀಯರಿಗೆ ಸಿಹಿ ಅಂದರೆ ತುಂಬಾ ಇಷ್ಟ) ಮತ್ತು ಟೀ ಜೊತೆಗೆ ಬಂದಳಂತೆ. ಲಡ್ಡೂ ಕಂಡೊಡನೆ ಸದ್ದಾಂ ಒಂದನ್ನು ತೆಗೆದು ತಿಂದನಂತೆ,



ಕಣ್ಣು ಅರಳಿತು. ಬಾಯಿ ಚಪ್ಪರಿಸಿದ. ಇನ್ನೊಂದು ಮತ್ತೊಂದು ಅಂತ ಮೂರು ಲಡ್ಡುಗಳನ್ನು ಒಟ್ಟಿಗೆ ಗುಳುಪ್ ಮಾಡಿದ್ದಲ್ಲದೆ ತನ್ನ ಜೊತೆಯಲ್ಲಿದ್ದವರನ್ನೆಲ್ಲಾ ತಿನ್ನಿ ತಿನ್ನೀಂತ ಬಲವಂತ ಮಾಡಿದನಂತೆ. ಕೊನೆಯದಾಗಿ ಮಿಕ್ಕ ಲಡ್ಡುಗಳನ್ನೆಲ್ಲಾ ಪ್ಯಾಕ್ ಮಾಡಿಸಿಕೊಂಡೂ ಹೋದನಂತೆ. ಅಂತೂ ತಿಂದೂ ಹೋದ ಕೊಂಡೂ ಹೋದ ಅನ್ನೋ ಗಾದೆ ಸರಿಯಾಗಿದೆ! ಅವನು ಹೊರಟ ತಕ್ಷಣ ಸರದಾರಜಿ "ಸಧ್ಯ! ಬದುಕಿದೆಯಾ ಬಡಜೀವ!" ಅಂತ ವಾಹಿ ಗುರುವಿನ ಫೋಟೋಗೆ ನಮಸ್ಕರಿಸಿದ.

ಈ ಘಟನೆ ನಡೆದು ಸುಮಾರು 20-25 ದಿನಗಳು ಕಳೆದಿರಬಹುದು. ಒಂದು ದಿನ ಮನೆ ಮುಂದೆ Official car ಬಂದ ನಿಂತಿತಂತೆ. ಅದರಲ್ಲಿ ಬಂದಾತನೊಬ್ಬ ಇವರಿಗೆ "With best compliments from the President" ಅಂತ ಒಂದು packet ಕೊಟ್ಟು ಹೋದನಂತೆ. ಅದರಲ್ಲಿ diamond studded swiss watch ಮನೆಯೊಡತಿಗೆ. 4 air ticketಗಳು ದೆಹಲಿಗೆ with return tickets ಮತ್ತು ಸರದಾರನಿಗೆ ಸುಮಾರು 10,000 dirhams ಗಳು. ಇವರ ಆತಿಥ್ಯಕ್ಕೆ ಸದ್ದಾಂ ಹುಸ್ಸೈನ್ ಕೊಟ್ಟ ಕಾಣಿಕೆ.

ಹಾಗೇ ಸದ್ದಾಂ ಇರಾಕಿಗಳ ಮನೆಗೆ ಹೋಗೋದು ವಯಸ್ಸಾದ ಹೆಂಗಸರು, ಗಂಡಸರು ಮತ್ತು ಮಕ್ಕಳೊಂದಿಗೆ ಪ್ರೀತಿಯಿಂದ ಹರಟೆ ಹೊಡಿಯೋದು ಅವರ ಕಷ್ಟ ಸುಖಗಳನ್ನು ವಿಚಾರಿಸೋದು - ಅವರು ಪ್ರೀತಿಯಿಂದ ಕೊಟ್ಟ ಚಹಾವನ್ನು ಗುಟುಕರಿಸೋದು ಇದೆಲ್ಲವನ್ನೂ ಟಿವಿಯಲ್ಲಿ ನೋಡುತ್ತಿದ್ದೆವು. ವಯಸ್ಸಾದವರಂತೂ ಅವನ ಕೆನ್ನೆ ಸವರಿ ಅವನಿಗೆ ಆಶೀರ್ವಾದ ಮಾಡುವರು.

ಸರದಾರನಿಗೆ ಅದೃಷ್ಟ ಕುಲಾಯಿಸಿದ್ದು ಅಲ್ಲಿನ ಭಾರತೀಯರಿಗೆಲ್ಲಾ ಹರಡಿತು. ಕೆಲವರು ಆಶ್ಚರ್ಯಪಟ್ಟರು. ಸ್ವಲ್ಪ ಜನ ಸಂತೋಷವೂ ಪಟ್ಟರು. ಆದರೆ ಕರುಬಿದವರೇ ಜಾಸ್ತಿ ಅನ್ನಬೇಕು. ಯಾರಿಗಾದರೂ ಜಾಸ್ತಿ increment ಬಂದರೆ ಅಥವಾ ಹೆಚ್ಚಿನ ಸಂಬಳದ ಬೇರೆ ಯಾವುದಾದರೂ ಕೆಲಸ ಸಿಕ್ಕಿದರೆ ಹೊಟ್ಟೆಕಿಚ್ಚು ಪಡುವವರೇ ಜಾಸ್ತಿ! ಅದು ನನ್ನ ಅನುಭವಕ್ಕೆ ಒಂದು ಮಾತು.

ಒಂದು ಸಂತೋಷ ಕೂಟದಲ್ಲಿ ಹೀಗೇ ಮಾತಾಡ್ತಾ ಸರದಾರಜೀಯ ಅದೃಷ್ಟದ ಕಡೆಗೆ ವಿಷಯ ತಿರುಗಿತು. ತಟ್ಟೆ ಭರ್ತಿ hosts ಇಟ್ಟಿದ್ದ ಪಿಸ್ತಾ ಬಾದಾಮಿಗಳನ್ನು ಮೆಲ್ಲುತ್ತಾ "ನಾನೂ ಡಬ್ಬಾ ಭರ್ತಿ ಲಡ್ಡುಗಳನ್ನ ಮಾಡಿಟ್ಟಿದ್ದೀನಮ್ಮಾ! ಯಾವಾಗ ಸದ್ದಾಂರವರು ತಮ್ಮ ಪಾದಗಳನ್ನು ನಮ್ಮ ಮನೆಯಡೆ ಬೆಳೆಸುತ್ತಾರೋ ಆವಾಗ ನಾನು ಓಡಿ ಹೋಗಿ ಆ ಡಬ್ಬವನ್ನೇ ಅವರ ಮುಂದೆ ಹಿಡಿದುಬಿಡುತ್ತೇನೆ" ಅಂತ ನಾಟಕೀಯವಾಗಿ ಹೇಳಿದೆ. ಆಮೇಲೆ

ನೋಡ್ತಾಯಿರಿ - ಡೈಮಂಡ್ ರಿಸ್ಟ್ ವಾಚ್, ಕೈ ತುಂಬಾ ಹಣ - ಲೊಚಗುಟ್ಟಿದೆ. ಅಲ್ಲೇ ಪಕ್ಕದಲ್ಲಿ ಕುಳಿತಿದ್ದ ಮಾಲಾ ''ಹೂ! ಹಾಗೇ ಮಾಡು! ಡಬ್ಬ ಭರ್ತಿ ಲಾಡು ಕೊಂಡು His next command will be - ಇವಳನ್ನು ನಾಲ್ಕೂ ರಸ್ತೆ ಸೇರೋ ಚೌರಾಹೇನಲ್ಲಿ ಗಲ್ಲಿಗೆ ಏರ್ಸಿಬಿಡಿ!''

''ಕಾರಣ ಏನು?' ಬೇಸನ್ ಲಡ್ಡೂ ಡಬ್ಬಾ ಭರ್ತಿ ಕೊಟ್ಟಿರ್ತೀನಲ್ಲಾ! ಅಂದೆ.

''ಅವನಿಗೆ ಕಾರಣ ಬೇರೆ ಬೇಕೇನು! ಸರದಾರಜೀ ಹೆಂಡ್ತಿ ಮಾಡಿಕೊಟ್ಟಿದ್ದನ್ನೇ ನೀನು ಕೊಟ್ಟಿಲ್ಲಾ. ನಿನ್ನ ದುರಾಸೆಗೆ ಪ್ರತಿಫಲ ಅತ ಗಲ್ಲಿಗೆ ಹಾಕ್ತಾನೇ'' ಅಂದಳು. ನಾವೆಲ್ಲಾ ನಗೆಯಾಡಿದೆವು.

ಆಮೇಲೆ ಆ ಸರದಾರನ ಕಥೆ ಏನಾಯ್ತೂ ಅಂತೀರಾ! ದೆಹಲಿಗೆ ಹೋದೋನು ಬಸ್ರಾ ಕಡೆ ತಲೆ ಹಾಕೂ ಮಲಗಲಿಲ್ಲವಂತೆ. ಹೇಗೋ ಸುಮಾರು ಹಣ ಬಂತು. ತಾನೂ ಸೇರಿಸಿಟ್ಟಿದ್ದ ಹಣ ತಕ್ಕಷ್ಟಿತ್ತು. ಅಲ್ಲೇ business ಶುರು ಮಾಡೇಬಿಟ್ನಂತೆ, ಯಾತಕ್ಕೆ ಬಸ್ರಾಗೆ ಹೋಗಲಿಲ್ಲ ಅಂತ ಯಾರೋ ಕೇಳಿದ್ದಕ್ಕೆ ''ಅಯ್ಯೋ! ಹಿರಿಯರ ದೃಷ್ಟಿ ಮೇಲೆ ಬಿದ್ಬಿಟ್ಟು. ಅದರಿಂದ ಯಾವಾಗಲೂ ಒಳ್ಳೆಯದೇ ಆಗುತ್ತೇ ಅಂತ ಹೇಳೋದಕ್ಕೆ ಆಗೋದಿಲ್ಲ. ಇವತ್ತು ಕೈ ತುಂಬ ಹಣ ಕೊಟ್ಟೋನು ನಾಳೆ ಕತ್ತು ತೆಗೆಯೋದಕ್ಕೂ ಹೇಸೋದಿಲ್ಲ!'' ಅಂತ ಅಂದನಂತೆ.

ಜಾಣ ಸರದಾರಜೀ ಅಂತ ಎಲ್ಲರೂ ಒಪ್ಪಿದೆವು.

★★★

ಪಾದಯಾತ್ರೆ

ದೇವರ ರಥಯಾತ್ರೆ
ಪಾದಗಟ್ಟೆಯವರೆಗೆ
ರಾಜಕಾರಣಿಗಳ ಪಾದಯಾತ್ರೆ
ಮತಗಟ್ಟೆಯ ಗುರಿಗೆ

- ಎಂ.ಜಿ. ಬಿರಾದಾರ

ಆಽಕಳಿಕೆ ಪುರಾಣ

– ಶೋಭಾ ಪ್ರಮೋದ್

ಮನುಷ್ಯ ಪ್ರಾಣಿ ಎಂದಮೇಲೆ, ಆತನಿಗೆ ಏನಾದರೊಂದು ದೌರ್ಬಲ್ಯ ಇದ್ದೇ ಇರುತ್ತೆ ಬಿಡಿ. ನನಗೂ ಒಂದು ದೌರ್ಬಲ್ಯವಿದೆ. ಅದೆಂದರೆ ಆಗಾಗ ಆಽಕಳಿಕೆ ತೆಗೆಯುವುದು!!

ಕನ್ನಡ ಶಾಲೆಯಲ್ಲಿ ಓದುತ್ತಿದ್ದಾಗ, ಬೆಳಿಗ್ಗೆ ಏಳೂವರೆ ಘಂಟೆಗೆ, ಗಣಿತ ಪೀರಿಯಡ್ಡಿನಲ್ಲಿ, ನನಗೆ ಬೇಡವೆಂದರೂ ನೂರಾರು ಆಕಳಿಕೆಗಳು ಬಂದೇ ಬರುತ್ತಿದ್ದವು! ಗಣಿತ ವಿಷಯ ನನ್ನ ಪರಮ ಶತ್ರುವಾದ ಕಾರಣಕ್ಕಾಗಿ, ಇಡೀ ಬ್ರಹ್ಮಾಂಡ ಹೋಗಬಹುದಾದಷ್ಟು, ನನ್ನ ಬಾಯಿ ತೆರೆಯಲ್ಪಟ್ಟಿದ್ದರೂ, ಒಂದೇ ಒಂದು ಪ್ರಮೇಯ ಮೆದುಳಿಗೆ ಹೋಗದೆ, ಶಿಕ್ಷಕರು ಕಲಿಸಿದ್ದು, ಒಂದು ಕಿವಿಯಿಂದ, ಇನ್ನೊಂದು ಕಿವಿಯನ್ನು ತಲುಪಿ ಅಂತೂ ಮೆದುಳು ಮಾತ್ರ ಖಾಲಿ ಬುರುಡೆಯೇ ಆಗಿರುತ್ತಿತ್ತು ಸ್ವಾಮೀ!

''ಮೊದಲನೆಯ ಪೀರಿಯಡ್ಡಿನಲ್ಲಿ ಆಕಳಿಕೆ ತೆಗೆದರೆ, ಎರಡನೆಯ ಪೀರಿಯಡ್ಡಿನಲ್ಲಿ ನಿದ್ದೆ ಮಾಡ್ತೀಯೇನೇ ಕತ್ತೆ!'' ಎಂದು ಮೇಡಂ, ಚೆನ್ನಾಗಿ ಬಯ್ದು, ಹೊಡೆದು, ಸಾಲದ್ದಕ್ಕೆ, ಕಿವಿ ಹಿಂಡಿ, ಅಂತೂ ಕಣ್ಣೀರು ತರಿಸುತ್ತಿದ್ದರು!

ಹೀಗೆ, ಆಕಳಿಕೆ ತೆಗೆದೇ, ನನ್ನ ಕಾಲೇಜು ಶಿಕ್ಷಣವನ್ನು ಪೂರ್ಣ ಮಾಡಿದೆ.

ಈಗ, ಆಗ ಗೈದ ಸಕಲ ಪಾಪಗಳ ಪರಿಹಾರವೋ ಎಂಬಂತೆ, ನಮ್ಮೂರಿನ ಹೈಸ್ಕೂಲಿನಲ್ಲಿ ಶಿಕ್ಷಕಿಯಾಗಿದ್ದೇನೆ ಸ್ವಾಮೀ!!


ಬೆಳಿಗ್ಗೆ ಎದ್ದು, ಸ್ನಾನ ಮಾಡಿ, ಗಂಡ-ಮಕ್ಕಳಿಗೆ ಟಿಫಿನ್, ಬಳಿಕ ದೇವರ ಪೂಜೆ ಮುಗಿಸಿ, ಮಧ್ಯಾಹ್ನ ಹನ್ನೊಂದು ಘಂಟೆಗೆ, ಹೆಚ್ಚು ಕಡಿಮೆ ಓಡಿಯೇ ಶಾಲೆ ತಲುಪುತ್ತೇನೆ! ವಿದ್ಯಾರ್ಥಿಗಳಿಗೆ ಕಲಿಸುವಾಗ, ನನ್ನ ಸ್ವಭಾವ ಧರ್ಮಕ್ಕನುಸಾರವಾಗಿ ಆಗಾಗ ಆಕಳಿಕೆ ಮಹಾಶಯ ಬಂದೇ ಬರುತ್ತಾನೆ.

ಆಕಳಿಕೆ ಬಂದರೆ, ಬಾಯಿ ಆಽ ಮಾಡುವುದು ಅಸಭ್ಯವೆಂದು, ಕಷ್ಟಪಟ್ಟು ಬಾಯಿ ಬಂದ್ ಮಾಡಿ, ಮೂಗಿನಿಂದ ಆಕಳಿಕೆಯನ್ನು ತೆಗೆಯುತ್ತೇನೆ. ಹಾಗಾಗಿ, ನನ್ನ ಮೊಂಡು ಮೂಗು, ಇನ್ನಷ್ಟು ಮೊಂಡಾಗಿ ಚೀನಾ-ಟಿಬೇಟಿಯನ್ನರ ಮೂಗಿನಂತೆ ಆಗಿದೆ!

ಮೊನ್ನೆ, ಹೈಸ್ಕೂಲ್ ವಿದ್ಯಾರ್ಥಿಗಳ ಅರ್ಧವಾರ್ಷಿಕ ಪರೀಕ್ಷೆ ನಡೆದಿತ್ತು. ಮೂರು ತಾಸಿನ ತನಕ, ಸೂಪರ್‌ವೈಸರ್ ಕೆಲಸ ಮಾಡಿಕೊಂಡು, ನೂರಾರು ಆಕಳಿಕೆಗಳು ಬರುತ್ತಿದ್ದವು. ಸ್ವಲ್ಪ ಕಣ್ಣು ಮುಚ್ಚಿದರೂ ಜೊಂಪು ಬರುವಂತಾಗುತ್ತಿತ್ತು. ಹಾಗಾಗಿ, ಲಘುನಿದ್ರೆ, ಗಾಢ ನಿದ್ದೆಯ ಲೋಕದಲ್ಲಿ ಜಾರಬಾರದೆಂದು, ಬಾಯಿಯ ಮುಂದೆ ಎಡಗೈ ಅಡ್ಡ ಹಿಡಿದು, ಆಕಳಿಕೆ ತೆಗೆಯುತ್ತಿದ್ದೆ! ಇದನ್ನು ಕಂಡ ವಿದ್ಯಾರ್ಥಿಗಳು ಮುಸಿ, ಮುಸಿ ನಗುತ್ತಿದ್ದರೂ, ಆಕಳಿಕೆಗಳಿಗೆ ನಾಚಿಕೆ ಎಂಬುದೇ ಇರಲಿಲ್ಲ!

ಅವಿರತ, ಅಗಣಿತ, ಅಸಹನೀಯ, ಅತುಲನೀಯ, ಅವ್ಯಾಹತ, ಹೀಗೆ ಐವತ್ತಕ್ಕೂ ಹೆಚ್ಚು, ಆಕಳಿಕೆಗಳ ಸಮಾನಾರ್ಥದ ಪದಗಳನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟಿದ್ದೇನೆ! ಆಗ ಮಾತ್ರ ಒಂದೂ ಆಕಳಿಕೆಗಳು ಬಂದಿಲ್ಲ. ಹಾಗಾಗಿ, ಆಕಳಿಕೆಗಳಿಗೆ ತಿಳುವಳಿಕೆ ಎಂಬುದು ಖಂಡಿತ ಇದೆ ಎಂದು ನನ್ನ ವಾದ!

ಆಕಳಿಕೆಗಳು ಪ್ರಚಾರ ಪ್ರಿಯರು. ಕಾರಣ, ಚುನಾವಣೆ ಪ್ರಚಾರದ ಸಂದರ್ಭದಲ್ಲಿ, ಶಿಕ್ಷಣ ಮಂತ್ರಿ, ಮುಖ್ಯಮಂತ್ರಿ ಇವರೆಲ್ಲರೂ ನಮ್ಮೂರಿಗೆ.



ಬಂದು, ಚುನಾವಣೆ ಪ್ರಚಾರವನ್ನು ಮಾಡಿದ್ದೇ ಮಾಡಿದ್ದು! ಇಡೀ ರಾತ್ರಿ ಜಾಗರಣೆ ಮಾಡಿ ಕಾರಣಕ್ಕಾಗಿ, ಇತರ ಮಂತ್ರಿಗಳ ಭಾಷಣದ ವೇಳೆಯಲ್ಲಿ, ಪಾಪ, ಮುಖ್ಯಮಂತ್ರಿಗಳಿಗೆ ಒಂದೇ ಸಮನೆ, ಆಕಳಿಕೆ ಬರುತ್ತಿತ್ತು! ನಾನೂ ಆಕಳಿಕೆ ಪ್ರಿಯಳಾದ ಕಾರಣ, ಅವರನ್ನೇ ನೋಡಿ, ಮನಸ್ಸಿನಲ್ಲಿಯೇ ನಗುತ್ತಿದ್ದೆ! ಒಂದೇ ಸಮನೆ ಬರುವ ಆಕಳಿಕೆಗಳನ್ನು, ಮೂಗಿನಿಂದ ತೆಗೆದು, ಅಂತೂ ಬಹಳ ಕಷ್ಟಪಡುತ್ತಿದ್ದ ಅವರನ್ನು ಕಂಡು, ನನಗಂತೂ ಕನಿಕರವೇ ಉಂಟಾಯಿತೆನ್ನಿ! ನಾನೂ ಒಂದು ದಿನ, ಆಕಳಿಕೆ ತೆಗೆದೇ, ಮುಖ್ಯಮಂತ್ರಿ ಆದರೂ ಆದೆ ಎಂದೂ ತಿರುಕನ ಕನಸು ಕಂಡಿದ್ದೇನೆ!

ಸಂಪಾದಕರು, ಆಕಳಿಕೆ ಪ್ರಿಯರಾದರೆ, ಖಂಡಿತ ಉದಾರ ಮನಸ್ಸಿನಿಂದ, ನನ್ನ ಈ ಲೇಖನವನ್ನು ಪ್ರಕಟಿಸುತ್ತಾರೆ. ಅವರು ಆಕಳಿಕೆ ಪ್ರಿಯರಲ್ಲದಾದರೆ ಕಸದ ಬುಟ್ಟಿಗೆ ನನ್ನ ಬರೆಹವನ್ನು ಎಸೆಯುತ್ತಾರೆ.

ಈಗ, ರಾತ್ರಿ ಹನ್ನೆರಡು ಗಂಟೆಯಾಗಿದೆ. ಆಕಳಿಕೆಗಳನ್ನು ಕಷ್ಟಪಟ್ಟು ನಿಲ್ಲಿಸಿ, ಆ ಬಗ್ಗೆಯೇ ಕೊರೆಯುತ್ತಿದ್ದೇನೆ. ಪರಮಾಶ್ಚರ್ಯವೆಂದರೆ, ಈಗ ಒಂದೂ ಆಕಳಿಕೆ ಬರುತ್ತಿಲ್ಲ ಮಾರಾಯ್ರೇ!! ಆಕಳಿಕೆಗಳು ಬುದ್ಧಿವಂತರು ಅಲ್ವೇ?!

★★★

ಹೆಣ್ಣು ಗಂಡು

ಹೆಣ್ಣೇ, ನೀನು ಅರ್ಥವಾಗದ
ಪುಸ್ತಕ ಎಂದರೆ
ಗಂಡೇ, ನೀನು ಮೆದುಳಿಲ್ಲದ
ಮಸ್ತಕ ಎನ್ನಬೇಕೆ?

- ಎಂ.ಜಿ. ಬಿರಾದಾರ

ಮಲೆನಾಡ ಕಂಪು

- ಭರತ್

ಮಕ್ಕಳಾಗಿದ್ದಾಗ ನಮ್ಮ ಘ್ರಾಣೇಂದ್ರಿಯಗಳು ನಾಯಿಗಳಿಗಿರುವಂತೆ ಬಹು ಪ್ರಬಲವಾಗಿರುತ್ತದಂತೆ. ಬೆಳೆಯುತ್ತ ಬೆಳೆಯುತ್ತ ಈ ಶಕ್ತಿ ಕುಗ್ಗುತ್ತಾ ಬರುತ್ತದಂತೆ. ಆದರೆ ನಿಜವಾದ ವಾಸನಾಗ್ರಹಣಿ ಜೀವನ ಪರ್ಯಂತ ವಾಸನಾಗ್ರಹಣಿಯಾಗಿಯೇ ಉಳಿಯುತ್ತಾನೆಂದು ನನ್ನ ಅಭಿಮತ. ಮಲೆನಾಡಿನ ಮಲೇರಿಯಾ ಕೊಂಪೆಯಲ್ಲಿ ಸನ್ನಿ ಹಿಡಿದು ಮಲಗಿದ್ದಾಗ, ನನ್ನ ಜ್ವರಗ್ರಸ್ತ ಕಲ್ಪನೆಗೆ ಸಾಹಿತ್ಯಲೋಕದ ಹೀರೋಗಳ, ಮಹಾನ್ ಮಹಿಳೆಯರ ಪರಿಚಯ ಮಾಡಿಕೊಡುತ್ತಿದ್ದ ಪುಸ್ತಕಗಳ (ದಪ್ಪ ಅಕ್ಷರಗಳಿಂದ ಮುದ್ರಿತವಾಗಿದ್ದ ಇವುಗಳಲ್ಲಿ ಕೈಯಿಂದ ತಯಾರಾದ ಕಾಗದಗಳನ್ನು ಬಳಸಿರುತ್ತಿದ್ದರು) ಮುಗ್ಗಲು ಗೋಧಿ ವಾಸನೆಯನ್ನು ನಾನು ಎಂದಿಗೂ ಮರೆಯುವಂತಿಲ್ಲ.

ನಾನು ಮೊಟ್ಟ ಮೊದಲಿಗೆ ಕನ್ನಡ ಪ್ರೌಢಶಾಲೆ ಸೇರುವ ಹೊತ್ತಿಗೆ ನನ್ನ ಹಳ್ಳಿಯ ಸುತ್ತಲಿನ ಬೊಂಬು, ಬರೆಯಲು ಬಳಸುವ ಎಕ್ಸರ್ಸೈಜ್ ಪುಸ್ತಕವಾಗಿ ಬದಲಾಗಿತ್ತು. ಇದರ ವಾಸನೆಯಂತೂ ಬಹಳ ಮಧುರವಾಗಿತ್ತು. ಕೈಕಾಗದದ ದುರ್ನಾತ ಇದಕ್ಕಿರಲಿಲ್ಲ. ಭದ್ರಾವತಿಯ ಕಾಗದದ ಕಾರ್ಖಾನೆಯಲ್ಲಿ ಕಾಗದ ತಯಾರಿಕೆಗೆ ಬಳಸುತ್ತಿದ್ದ ವಿವಿಧ ಮರಗಳ ಕಂಪು ನಮ್ಮ ಲೆಕ್ಕದ ಪುಸ್ತಕ, ಬೊಂಬೆ ಪುಸ್ತಕಗಳಲ್ಲಿ ಹೊರಹೊಮ್ಮುತ್ತಿತ್ತು.

ಆ ದಿನಗಳಲ್ಲಿ ಒಂದು ಹೊಸ ಪುಸ್ತಕವನ್ನು ಕೊಂಡ ತಕ್ಷಣ ಯಾರೂ ಇಲ್ಲದ ಯಾವುದಾದರೊಂದು ನಿರ್ಜನ ಪ್ರದೇಶಕ್ಕೆ ಹೋಗಿ ಪುಸ್ತಕದ ಯಾವುದಾದರೊಂದು ಪುಟವನ್ನು ತೆರೆದು ಆಳವಾಗಿ ಅದರ ಕಂಪನ್ನು ಸವಿಯುವುದು ಬಲು ಖುಷಿ ಕೊಡುತ್ತಿತ್ತು. ವಿದೇಶದ ಪುಸ್ತಕಗಳಾದ ಆಂಟೋನ್ ಛಕೋವ್ (ಮಾಡರ್ನ್ ಲೈಬ್ರರಿ 1931), ಅಥವಾ ಪಿ.ಜಿ.ವುಡ್ ಹೌಸ್ (ಹರ್ಬರ್ಟ್ ಜಂಕಿಂನ್ಸ್, 18ನೆಯ ಮುದ್ರಣ, ಆರು ಲಕ್ಷ ಪ್ರತಿಗಳು) ಡಿಕನ್ಸ್ (ಮ್ಯಾಕ್‌ಮಿಲನ್ ಕಂ. 1954), ಯಾವುದೇ ಆಗಿರಲಿ ಹೊಸದರಲ್ಲಿ ಸ್ಯಾಟನ್ ಬಟ್ಟೆಯ ಕಂಪನ್ನು ಹೊಂದಿದ್ದು, ಪುಸ್ತಕಗಳು ಹಳೆಯದಾದಂತೆ ಅವುಗಳ ವಾಸನೆ ಹಳೆಯ ಡ್ರಾಮಾ ಕರ್ಟನ್‌ಗಳನ್ನು ನೆನಪಿಗೆ ತರುವಂತಿತ್ತು. ಇದಾದ ನಂತರ ಈ ವಾಸನೆಯೇ ಭದ್ರವಾಗಿ ಪುಸ್ತಕಕ್ಕೆ ಅಂಟಿಕೊಂಡು, ಇಂದಿಗೂ ಈ ಪುಸ್ತಕಗಳನ್ನು ತೆರೆದಾಗ ನಾಸ್ಟಾಲ್ಜಿಯಾ ಗರಿಗೆದರುತ್ತದೆ.

ಆದರೆ ಘ್ರಾಣೇಂದ್ರಿಯಕ್ಕೆ ನಿಜವಾದ ಹಬ್ಬವೆಂದರೆ ಕನ್ನಡ ಪುಸ್ತಕಗಳನ್ನು ಕೊಂಡಾಗ. ಬೈಸನ್ ಬ್ರಾಂಡ್ ಕಾಗದ ಬಳಸಿ ಮುದ್ರಿಸಿದ ''ಕಾಯೌ ಶ್ರೀಗೌರಿ'' ''ಕಾನೂರು ಹೆಗ್ಗಡತಿ'' (ಹೊದಿಕೆಯ ಮೇಲೆ ಎರಡು ಪ್ರಣಯ ಪಕ್ಷಿಗಳ ಚಿತ್ರ), ''ಮರಳಿ ಮಣ್ಣಿಗೆ'' (ಅದರ ಛಾಕೊಲೇಟ್ ಬಣ್ಣದ ಹೊದಿಕೆ) ''ಅಶ್ವತ್ಥಾಮ'', ''ಪರ್ಣಕುಟಿ'' ಇವೆಲ್ಲ ಪುಸ್ತಕಗಳಿಗೆ ಅವುಗಳದ್ದೇ ಆದ ಒಂದು ಮಾಧುರ್ಯವಿತ್ತು. ಅವುಗಳ ಕಂಪು, ಮಲೆನಾಡಿನ ಮಣ್ಣು, ಸಸಿಗಳು, ಬಳ್ಳಿಗಳು, ಮೂಲಿಕೆಗಳು ಇವುಗಳೆಲ್ಲದರ ಒಂದು ಸಮ್ಮಿಶ್ರ ನೆನಪನ್ನು ತರುತ್ತಿದ್ದವು. ಈಗಲೂ ಹೆಗ್ಗಡತಿ ಪುಸ್ತಕದ ಹಳೆಯ ಪ್ರತಿಯೊಂದನ್ನು ತೆರೆದಾಕ್ಷಣ ನನ್ನ ಮನ ಮಲೆನಾಡಿನ ಕಾಡಿನ ಮೂಲೆಯೊಂದಕ್ಕೆ ತಾನಾಗಿಯೇ ಓಡಿಬಿಡುತ್ತದೆ.

ಆ ದಿನಗಳು ಹಾಗಿದ್ದವು ಅನ್ನಿ.

ಶಿವಮೊಗ್ಗೆಯನ್ನು ಸುತ್ತುವರಿದ ಮಲೆನಾಡಿನ ದಟ್ಟ ಕಾಡಿನ ಅಂಚು, ಸೂರ್ಯ ಮುಳುಗುವಾಗ ಸಿಲೆಟ್ ರೂಪದಲ್ಲಿ ಕಂಡು, ಕಾಡನ್ನು ಮನೆಯ ಹೊಸ್ತಿಲಿಗೇ ತಂದುಬಿಡುತ್ತಿತ್ತು. ಚಳಿಗಾಲದಲ್ಲಿ ಸರ್ರನೆ ಮುಳುಗುವ ರವಿ, ಬೇಸಗೆಯಲ್ಲಿ ವಿವಿಧ ಬಣ್ಣಗಳ ಜಾಲವನ್ನೇ ಸೃಷ್ಟಿಸಿ, ಮರಗಳ ಗುಂಪಿಗೆ ಮೆರಗು ನೀಡಿ ಅಸ್ತಮಿಸುತ್ತಿದ್ದ. ಸಂಜೆಯಾಯಿತೆಂದರೆ, ಹಾವು, ಹುಪ್ಪಟೆಗಳಿಂದ, ಚಿರತೆ ನರಿಗಳಿಂದ ರಕ್ಷಿಸಿಕೊಳ್ಳಲು ಬಾಗಿಲನ್ನು ಭದ್ರಪಡಿಸಿ ಆ ಪ್ರಾಣಿಗಳ ಕೂಗಿನ ಜೋಗುಳದಲ್ಲೇ ಸುಖವಾಗಿ ನಿದ್ರಿಸಿಬಿಡುತ್ತಿದ್ದೆವು. ಮನೆ ಬಾಗಿಲನ್ನು ತೆರೆದು ಹದಿನೈದು ನಿಮಿಷಗಳ ನಡಿಗೆಯ ದೂರವಿದ್ದ ಸಾಗರದ ರಸ್ತೆಯ ಟೋಲ್‌ಗೇಟನ್ನು ತಲುಪುವುದು ಅತ್ಯಂತ ಎದೆಗಾರಿಕೆಯ ಸಾಹಸವಾಗಿತ್ತು.

ಈಗ ನೀವು ಆರಾಮವಾಗಿ ಆ ರಸ್ತೆಯಲ್ಲಿ ನಡೆಯಬಹುದು. ನಡೆಯುವುದೇನು, ಶಕ್ತಿ ಇದ್ದರೆ ಕುಂಸಿಯವರೆಗೂ ಓಡಿಬಿಡಬಹುದು. ಮಲೆನಾಡಿನ ಮಳೆಯ ಕಾಡುಗಳು ಈಗ ಕಣ್ಮರೆಯಾಗಿವೆ. ಕಾಡೆಲ್ಲಾ ಭದ್ರಾವತಿಯ ಕಾಗದದ ಕಾರ್ಖಾನೆಯ ಹೊಟ್ಟೆಗೇ ಆಹುತಿಯಾಗಿದೆ. ಬಿಡಿ ಬಿಡಿಯಾದ ಯೂಕಲಿಪ್ಟಸ್ ಮರಗಳು ಅರ್ಥವಿಲ್ಲದೆ ನಿಂತಿವೆ. ಒಮ್ಮೆ ದಟ್ಟವಾಗಿದ್ದ ಕಾಡು ಈಗ ಕುರುಚಲುಗಳಿಂದ ತುಂಬಿದೆ. ಬೆಳದಿಂಗಳು ಎಲ್ಲೆಲ್ಲೂ ನೆಲಕ್ಕೆ ಹರಡಿರುವುದು ಕಾಣುತ್ತದೆ. ಕಾಡಿನ ಶ್ರೀಮಂತ ದನಿ ಈಗ ಕೇವಲ ಪಕ್ಷಿಗಳ ಚಿಲಿಪಿಲಿ ಹಾಗು ಕಪ್ಪೆಗಳ ವಟಗುಟ್ಟುವಿಕೆಗೆ ಸೀಮಿತವಾಗಿದೆ. ಹಾಗಾಗಿ ಈಗ ಯಾವುದೇ ಲೇಖಕ್ ಎಕ್ಸ್‌ಪ್ರೆಸ್ ಪುಸ್ತಕದ ವಾಸನೆ ಇನ್ನೊಂದು ಪುಸ್ತಕಕ್ಕಿಂತ ಬೇರೆ ಇರುವುದಿಲ್ಲ. ಎಲ್ಲಾ ರಾಸಯನಿಕ ದ್ರವ್ಯಗಳಿಂದ ತಯಾರಿಸಿದ ಸರಕು. ನೀವು ಈಗ ಓದುತ್ತಿರುವ ಪುಟದಂತೆ ಸೆಲ್ಯುಲೋಸ್ ಮತ್ತು ಮುದ್ರಣಕಾಯಿಯ ಪ್ರಪಂಚವಿದು. ಘ್ರಾಣಿಸಿ ನೋಡಿ, ನೀವು ವಾಸನಾಗ್ರಣಿಯಾಗಿದ್ದರೆ.

ಪೂಜೆ!

– ಹೆಚ್. ಗೋಪಾಲಕೃಷ್ಣ

ಫ್ಯಾಕ್ಟರಿಗಳು, ಬ್ಯಾಂಕು ಮತ್ತಿತರ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಡಿರುವವರು ನೀವಾದರೆ ಒಂದು ಸಂಗತಿ ನಿಮ್ಮ ಜೀವನದಲ್ಲಿ ಬೆರೆತು ಹೋಗಿರುತ್ತೆ. ಅದೇಂದರ ಶುಕ್ರವಾರ ಶುಕ್ರವಾರ ನಡೆಯುವ ಪೂಜೆ. ನನ್ನ ಆಪ್ತ ಗೆಳೆಯನೊಬ್ಬ ಬ್ಯಾಂಕಿನಲ್ಲಿ ಅಧಿಕಾರಿ. ಶುಕ್ರವಾರ ಶುಕ್ರವಾರದಂದು ಸಂಜೆ ನಾಲ್ಕರ ವೇಳೆಗೆ ಆತನ ಬ್ಯಾಂಕಿಗೆ ಭೇಟಿ ಕೊಡುವುದನ್ನು ಒಂದು ರೀತಿ 'ಅಡಿಕ್ಷನ್' ಹಾಗೆ ಅಭ್ಯಾಸ ಮಾಡಿಕೊಂಡಿದ್ದೆ. ಇದಕ್ಕೆ ಕಾರಣ ಅಂದರೆ ನಾಲ್ಕೂ ಇಪ್ಪತ್ತಕ್ಕೆ ವಿತರಣೆಯಾಗುತ್ತಿದ್ದ ಪ್ರಸಾದ ರೂಪದ ತಿಂಡಿಗಳು. ಬಾಳೆಹಣ್ಣಿನ ರಸಾಯನ, ಆಗತಾನೇ ಸಿಹಿ ಅಂಗಡಿಯಿಂದ ತರಲಾದ ತರಹೇವಾರಿ ಸ್ವೀಟುಗಳು, ಕಡಲೆ ಸೇರಿಸಿದ ಪುರಿ, ಅದಕ್ಕೆ ಸೇರಿಸಿರುವ ಕಾರಾ ಬೂಂದಿಗಳು ಇವುಗಳು ಒಂದು ರೀತಿ ನನ್ನನ್ನು ಆಗಾಗ ಆಕರ್ಷಿಸುತ್ತಿತ್ತು. ಕಾರ್ಖಾನೆಗಳಲ್ಲಾದರೆ ಇದರ ಮಜವೇ ಬೇರೆ. ಬೆಳಿಗ್ಗೆ ಕಾರ್ಖಾನೆಗೆ ಬಂದ ಕೂಡಲೇ ಶುಕ್ರವಾರಗಳಂದು ಈ ಪೂಜೆ ನಡೀತದೆ. ಸೆಕ್ಷನ್ನಿನ ಎಲ್ಲರೂ ಒಂದೆಡೆ ಸೇರಿ ಅಲ್ಲಿರುವ ಫೋಟೋಗಳಿಗೆ ಪೂಜೆ ನಡೆಸುವುದು ನೋಡುತ್ತಾ ನಿಲ್ಲುತ್ತಾರೆ. ಮಂಗಳಾರತಿ ಎತ್ತಿದ ನಂತರ ಪ್ರಸಾದ. ಈ ಪ್ರಸಾದವೂ ಒಂದೇ ತೆರವಾದ್ದು ಆದರೂ ಅದೇನೋ ರುಚಿ! ಪುರಿಗೆ ಕಡಲೆ ಸೇರಿಸಿ ಅದಕ್ಕೆ ಕಾರಾ ಬೂಂದಿಕಾಳು, ಸೀ ಬೂಂದಿ ಕಾಳು ಬೆರೆಸುತ್ತಾರೆ. ನಂತರ ಇದಕ್ಕೇ ಸಣ್ಣಗೆ ಹೆಚ್ಚಿದ ಬಾಳೆಹಣ್ಣು ತುಂಡುಗಳು ಮತ್ತು ಅಡ್ಡಾದಿಡ್ಡಿ ಒಡೆದ ತೆಂಗಿನ ಕಾಯಿಚೂರುಗಳು. ಕೆಲವು ಬಾರಿ ಮೈಸೂರ್‌ಪಾಕು ಮತ್ತು ದೂದ್ ಪೇಡಾದ ತುಂಡುಗಳೂ ಇದರಲ್ಲಿ ಸೇರುತ್ತದೆ. ದೊಡ್ಡ ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ಇವುಗಳನ್ನು ಬೆರೆಸಿ ಒಂದೆಡೆ ಇರಿಸಿ 'ಬನ್ರಪ್ಪೋ' ಅನ್ನುವುದೇ ತಡ ಪ್ರೊಲಿಟೇರಿಯನ್‌ಗಳು ಅತ್ತ ನುಗ್ಗುತ್ತವೆ. ಎರಡೂ ಬೊಗಸೆಗಳಲ್ಲಿ ಈ ಪ್ರಸಾದ ತೆಗೆದುಕೊಳ್ಳುತ್ತವೆ. ಪ್ರಸಾದ ಮುಕ್ಕುತ್ತಾ ಮೆಷೀನ್ ಎಡೆಗೆ ದೇಶ ಮುಂದೆ ತರಲು ಧಾವಿಸುತ್ತವೆ. ಈ ತರಹ ಪೂಜೆ ನಡೆಸಲು ಇಂತಹವರೇ ಆಗಬೇಕೆಂದಿಲ್ಲ - ಮಂತ್ರ ಪಂತ್ರ ಅಂರಿತಿರಬೇಕಿಲ್ಲ ಮತ್ತು ನಿಯಮಾನುಸಾರ ಪೂಜೆ ಸಲ್ಲಿಸಬೇಕೆಂಬ ರಿವಾಜೂ ಸಹ ಇಲ್ಲ! ಒಂದು ರೀತಿಯ ಲಿಬರೇಟೆಡ್ ದೇವರು ಮತ್ತು ಲಿಬರೇಟೆಡ್ ಭಕ್ತರು. ಎಡಗೈಲಿ ಬೀಡಿ ಸೇದುತ್ತಾ ಬಲಗೈಲಿ ಗಂಟೆ ಬಾರಿಸಬಹುದು. ಜಾತಿ ಪಾತಿಗಳು ಇಲ್ಲಿ ತಲೆ ಹಾಕದೇ ಎಲ್ಲ ''ವಿಶ್ವ ಕಾರ್ಮಿಕರು' ಒಂದಾಗುತ್ತಾರೆ.

ಮತ್ತೆ ಕೆಲವು ಕಾರ್ಮಿಕರಿಗೆ ಈ ದೇವರ ಪೂಜೆ ಎಂಬುವುದು ಒಂದು ರೀತಿಯ ಮನೋರೋಗವೇ ಆಗಿರುತ್ತದೆ ಎಂದು ನನ್ನ ಅನುಭವ. ಕೆಲ ವರುಷಗಳ ಹಿಂದೆ ನನಗೊಬ್ಬ ಸಹೋದ್ಯೋಗಿಯನ್ನ ತಂದು ಹಾಕಿದರು. ಎಲ್ಲೂ ಬೇಡದೇ ಇದ್ದ ಆತನನ್ನು 'ಸದ್ಯ ಇವನು ನಿಮ್ಮಲ್ಲಿರಲೀ ರೀ...' ಎಂದು ನಮ್ಮ ಬಾಸ್ ತಂದು ಬಿಟ್ಟ. ಸುಮಾರು ಇಪ್ಪತ್ತು ತಿಂಗಳು ಈ ಮನುಷ್ಯನ ಸಂಗಡ ಸಹಬಾಳ್ವೆ ನಡೆಸಿದೆ. ಸೆಕ್ಷನ್ ಪ್ರವೇಶಿಸಿದ ಕೂಡಲೇ ಸುತ್ತಮುತ್ತ ನೋಡಿದ ನಾಲ್ಕು ಕಡೆಯ ಗೋಡೆಗಳೂ ಖಾಲಿ ಖಾಲಿ ಇದ್ದದ್ದು ಕಂಡು ಈತನಿಗೆ ಬೇಸರ ಆಗಿರಬೇಕು. 'ಸಾರ್ ಒಂದು ಎಲ್ಪ್ ಬೇಕು' ಅಂದ. ಅದೆಂತಹ 'ಎಲ್ಪ್' ಕೇಳುತ್ತಾನೋ ಎಂದು ಅಳುಕುತ್ತಲೇ 'ಏನು?' ಅಂದೆ. ಅಳೇ ಸೆಕ್ಷನ್‌ನಲ್ಲಿ ದೇವರ ಫೋಟೋ ಮಡಿಕ್ಕಂಡಿದ್ದೆ. ಅದನ್ನ ತಕ್ಕೊಬಂದು ಈ ಗೋಡ್ಡಾಕ ಆಕಲಾ?....


'ಅಯ್ಯೋ ಹಾಕ್ಕೊಳ್ರೀ ನನ್ನ ಗಂಟೇನು ಹೋಗಬೇಕು?...' ಅಂದೆ. ಮಾರನೇದಿವಸ ಬೆಳಿಗ್ಗೆ ಟ್ರಾಲಿಯಲ್ಲಿ ಸುಮಾರು ಅರವತ್ತು ವಿವಿಧ ಸೈಜಿನ ದೇವರ ಫೋಟೋಗಳನ್ನು ತಂದು ಒಳಗಿರಿಸಿದ. ಕ್ಯಾಲೆಂಡರ್ ದೇವರುಗಳು, ಕಾರ್ಖಾನೆಯಲ್ಲಿಯೇ ಸಿಗುವ ಮರದ ರಿಪೀಸು ಇತ್ಯಾದಿಗಳಿಂದ ಫ್ರೇಂ ಮಾಡಿಸಿಕೊಂಡಿದ್ದರೆ, ಎಕ್ಸ್‌ಪೋರ್ಟ್ ಜಾಬಿಗೆ ಎಂದು ತಂದಿರಿಸಿದ್ದ ಫೈಬರ್ ಗ್ಲಾಸ್ ಹಲಗೆಗಳು ಫೋಟೋಗಳಿಗೆ ಗಾಜಾಗಿ ಪರಿವರ್ತಿತವಾಗಿತ್ತು. 'ನಾಲ್ಕು ಗೋಡೆಗಳಿಗೂ ಇವನ್ನ ತಗುಲಿ ಹಾಕ್ತೀರೇನ್ರೀ?' ಅಂದೆ ಗಾಬರಿಯಿಂದ.

'ಇಲ್ಲಾ ಸಾರ್. ಒಂದು ಗೋಡೆ ಅಂಗೇ ಬಿಡೋಣ ಅಲ್ಲಿ ಬೇಕಾರೆ ಕ್ಯಾಲೆಂಡರು ಪಾಲೆಂಡರು ತಕಲಿ ಆಕಬೋದು' ಅಂದ.

ಮತ್ತೆ ಒಂದು ತಿಂಗಳಿನಲ್ಲಿ ಮರದ ರಿಪೀಸುಗಳನ್ನು ಕಾರ್ಖಾನೆಯಲ್ಲಿ ಅತ್ತಿತ್ತ ಅಡ್ಡಾಡಿ ತಂದ. ಅವುಗಳಿಗೆ ತೂತು ಕೊರೆಸಿದ.

ಗೋಡೆ ಮೇಲೆ ನೆಲಕ್ಕೆ ಸಮಾನಾಂತರವಾಗಿ ಈ ಹಲಗೆ ಬಡಿದ. ನಂತರ ನಮ್ಮ ಕಾರ್ಖಾನೆಯ ಕಾರ್ಪೆಂಟರಿ ಸೆಕ್ಷನ್ನಿಗೆ ಹೋಗಿ ಮೊಳೆಗಳನ್ನ ತಂದ. ಜಂಪರ್ ತೂರಿಸಿ ಮೊಳೆ ಹೊಡೆದ. ನಂತರ ಈ ಫೋಟೋಗಳನ್ನು ಮೊಳೆಗಳಿಗೆ ನೇತು ಹಾಕಿದ. ಈ ಕೆಲಸ ಮುಗಿಯಲು ಸರಿಸುಮಾರು ಎರಡು ಎರಡೂವರೆ ತಿಂಗಳು ಬೇಕಾಯಿತು. 'ಸರಿ ಇನ್ನು ಮುಂದಾದರೂ ಸಂಬಳ ತಗೋತಾನಲ್ಲಾ ಅದಕ್ಕೆ ಸಂಬಂಧಿಸಿದ ಕೆಲಸ ಮಾಡುತ್ತಾನೆ' ಎಂದು ನಾನು ನಿರಾಳನಾದೆ.

ಈ ಕೆಲಸಗಳು ಮುಗಿದ ನಂತರ ಒಂದು ದಿನ ಬೆಳಿಗ್ಗೆ ಕಾರ್ಖಾನೆಗೆ ಈತ ಬಂದ. ಕೈಯಲ್ಲಿ ದೊಡ್ಡ ಚೀಲ ಅದರಲ್ಲಿ ಅರ್ಧ ಮೀಟರು ಉದ್ದದ ಮೂರು



ಸ್ಟೀಲ್ ಕ್ಯಾರಿಯರ್‌ಗಳು. ನಮಸ್ಕಾರದ ವಿತರಣೆ ನಂತರ ಫೋಟೋ ಏರಿಸದಿದ್ದ ಒಂದು ಗೋಡೆಕಡೆಗೆ ಚೇರು ಎಳೆದು ಕೂತ. ಎದುರಿಗೆ ತನ್ನ ಟೇಬಲ್ಲು ಇರಿಸಿಕೊಂಡ. ಆ ಚೀಲದಿಂದ ಮೂರೂ ಕ್ಯಾರಿಯರು ತೆಗೆದು ಮೇಲಿರಿಸಿದ. ನಾನು ಇವನು ಮಾಡುತ್ತಿರುವ ಕೆಲಸವನ್ನ ಅಗಲಕಣ್ಣು ಬಿಟ್ಟುಕೊಂಡು ನೋಡುತ್ತಲೇ ಕುಳಿತಿದ್ದೆ.

ಕ್ಯಾರಿಯರು ಬಿಚ್ಚಿದ. ಡಬ್ಬಿಗಳನ್ನು ತೆರೆದು ಸುತ್ತಲೂ ಹರಡಿಕೊಂಡ, ಡಬ್ಬಿಯಲ್ಲಿ ತಿಂಡಿ ತಂದಿರಬಹುದೇ ಎಂದು ಬಗ್ಗಿ ನೋಡಿದೆ. ಎಲ್ಲಾ ಖಾಲಿ ಡಬ್ಬಿಗಳು! ಷೂ ಬಿಚ್ಚಿದ, ಸಾಕ್ಸ್ ತೆಗೆದ. ಬರಿಕಾಲಿನಲ್ಲಿ ಒಂದೊಂದು ಸಲಕ್ಕೆ ಮೂರು ಮೂರು ಡಬ್ಬಿಗಳಂತೆ ತೆಗೆದುಕೊಂಡು ಆಚೆ ನಡೆದ. ಕಾರ್ಖಾನೆಯಲ್ಲೇ ಸಿಗುವ ವಿಮ್ ಪೌಡರಿನಿಂದ ಉಜ್ಜಿ ಉಜ್ಜಿ ತೊಳೆದು ಒಳಗೆ ತಂದಿರಿಸಿದ. ಕಾರ್ಖಾನೆ ಕೆಲಸ ಮರೆತು ಈತನ ಕೆಲಸ ನೋಡುತ್ತಾ ಕುಳಿತೆ.

ಕಾಫಿ ಬ್ರೆಡ್ಡು ಮುಗಿಸಿ ಈ ಕ್ಯಾರಿಯರ್ ಎತ್ತಿಕೊಂಡು ಆಚೆ ನಡೆದ. ಕಾರ್ಖಾನೆಯಲ್ಲಿ ಎಲ್ಲೆಂದರಲ್ಲಿ ವಿಶಾಲವಾಗಿ ಬೆಳೆಸಿದ ಹುಲ್ಲುಹಾಸು. ಇಂತಹ ಕಡೆ ಮೊದಲು ನಡೆದವನು ಒಂದು ಕ್ಯಾರಿಯರ್ ತುಂಬ ಹುಲ್ಲು ಕಿತ್ತು ತುಂಬಿದ.

ಮತ್ತೊಂದು ಕ್ಯಾರಿಯರ್‌ಗೆ ಕ್ಯಾನ್‌ವಾಸ್, ಡೆಪ್ಲೋರೆಲ್. ಸನ್ ಆಗ್ಯಾಂಟಾ ಮೊದಲಾದ ಶೋ ಗಿಡಗಳ ಹೂ ಕಿತ್ತು ತುಂಬಿದ. ಮತ್ತೊಂದು ಕ್ಯಾರಿಯರ್‌ಗೆ ಈ ಸಸ್ಯಗಳ ಎಲೆ ಕಿತ್ತು ತುಂಬಿದ. ಮೂರೂ ಕ್ಯಾರಿಯರ್ ಹೊತ್ತು ಸೆಕ್ಷನ್ನಿಗೆ ಬಂದ.

ಕುರ್ಚಿ ಮೇಲೆ ಕೂತು ಕ್ಯಾರಿಯರ್ ತೆಗೆದು ಅದರಲ್ಲಿನ ಹುಲ್ಲು ಜೋಡಿಸಲು ಆರಂಭಿಸಿದ. ಜೋಡಿಸಿದ ನಂತರ ಒಂದೊಂದೇ ಹುಲ್ಲು ತೆಗೆದುಕೊಂಡು ಕಣ್ಣಿನ ಹತ್ತಿರ ಹಿಡಿದು ಕತ್ತರಿಯಿಂದ ಕತ್ತರಿಸಿ ಬೇಡದ ಭಾಗ ತೆಗೆದು ಬೇಕಾದ್ದು ಪಕ್ಕಕ್ಕೆ ಇರಿಸಿದ. ಈ ವೇಳೆಗೆ ಊಟದ ಸಮಯದ ಸೈರನ್ ಕೂಗಿತು.

ಊಟಕ್ಕೆ ನಡೆದ - ಷೂ ಕಾಲುಚೀಲ ಧರಿಸಿ ಠೀಕಾಗಿ ಕ್ಯಾಂಟೀನ್‌ಗೆ ಹೆಜ್ಜೆ ಹಾಕಿದ. ಊಟ ಮುಗಿಸಿ ಬಂದವನು ಫಾರಿನ್ ಹೂವುಗಳನ್ನು ಜೋಡಿಸಿದ. ನಂತರ ಎಲೆಗಳು ಟೇಬಲ್ಲಿನ ಮೇಲೆ ತರಕಾರಿ ಅಂಗಡಿ ಕಂಡ ಹಾಗೆ ಕಾಣಿಸಿತು.

ತನ್ನ ಪರ್ಸನಲ್ ಕಬೋರ್ಡ್ ತೆಗೆದು ಅದರಿಂದ ಒಂದು ಪೆಟ್ಟಿಗೆ ತೆಗೆದ, ಅದರಲ್ಲಿಂದ ಮತ್ತೊಂದು ಪೆಟ್ಟಿಗೆ ಆಚೆ ಇರಿಸಿದ, ಅದನ್ನೂ ತೆರೆದು ಒಂದು ಪ್ಲಾಸ್ಟಿಕ್ ಕವರ್ ತೆಗೆದ. ಅದರಲ್ಲಿದ್ದ ದಾರ ಆಚೆ ಇರಿಸಿದ. ಇದೇ ಪ್ರೋಸೆಸ್ಸು ರಿಪೀಟಿಸಿ ಸೂಜಿಯನ್ನು ಮತ್ತೊಂದು ಪೆಟ್ಟಿಗೆಯಿಂದ ತೆರೆದ.

ಫೋಟೋ ತಗುಲಿ ಹಾಕಿದ್ದ ಮೂರೂ ಗೋಡೆಗಳ ಉದ್ದ ಅಳತೆ ಮಾಡಿ ಅದರಂತೆ ದಾರ ಕತ್ತರಿಸಿದ. (ಇದು ರೇಷ್ಮೆ ದಾರವಂತೆ. 'ಇದು ಮಡಿಗೆ ಬರುತ್ತೆ ಸಾರ್' ಎಂದ) ಹೂವು ಎಲೆ ಅಕ್ಕಪಕ್ಕದಲ್ಲಿ ಬರುವ ಹಾಗೆ ಅದನ್ನು ಕಟ್ಟಿದ. ನಂತರ ಹುಲ್ಲು ಬಿಡಿಸಿದ್ದು ಎರಿಸಿ ಚಿಕ್ಕ ಚಿಕ್ಕ ಗೊಂಚಲುಗಳನ್ನಾಗಿ ಮಾಡಿ ನವಿಲು ಗರಿಯಂತೆ ಹರಡಿ ಅವನ್ನೂ ಕಟ್ಟಿದ. ಈಗ ಟೀ ಸಮಯ. ಆಚೆ ಹೋಗಿ ಟೀ ಸೇವಿಸಿ ಬಂದ.

ಮತ್ತೆ ಷೂ ಬಿಚ್ಚಿದ, ಕಾಲುಚೇಲ ತೆಗೆದ. ಆಚೆ ಹೋಗಿ ಕೈಕಾಲಯು ತೊಳೆದು ಬಂದ. ಹತ್ತಿರವಿದ್ದ ಸ್ಟೂಲು ಒರೆಸಿ ಅದರ ಮೇಲೆ ನಿಂತು ಹುಲ್ಲಿನಲ್ಲಿ ಕಟ್ಟಿದ ನವಿಲುಗರಿ ಆಕಾರದ ಗೊಂಚಲನ್ನು ಫೋಟೋಗಳ ನೆತ್ತಿಗೆ ಸಿಕ್ಕಿಸಿದ. ನಂತರ ಇಳಿದು ಎಲೆಯ ಹೂವಿನ ಮಾಲೆಗಳನ್ನು ಫೋಟೋಗಳಿಗೆ ಬೇಕಾದಷ್ಟು ಕತ್ತರಿಸಿ ಫೋಟೋಗಳಿಗೆ ನೇತು ಹಾಕಿದ. ಸ್ಟೂಲಿನಿಂದ ಇಳಿದು ಗೋಡೆಗೊರಗಿ ಎರಡು ನಿಮಿಷ ಕೂತ. ನಂತರ ಸಾಕ್ಸ್ ಕಾಲುಚೀಲ ಧರಿಸಿ ಕ್ಯಾರಿಯರ್ ಹಿಡಿದು ಆಚೆ

ನಡೆದ. ಮತ್ತೆ ಆತನ ಹಿಂದೆ ನಡೆದೆ. ಕಾರ್ಖಾನೆಯ ಹುಲ್ಲುಗಾವಲಿನಿಂದ ಹುಲ್ಲು ಎಲೆ ಹೂವು ಕಿತ್ತು ಕ್ಯಾರಿಯರ್‌ಗೆ ತುಂಬಿಸಿದ.

ಅವನಿಗಿಂತ ಮೊದಲೇ ಬಂದು ಕೂತೆ.

'ಈಗೇನು ತಂದಿರಿ ಕ್ಯಾರಿಯರ್‌ನಲ್ಲಿ?' ಅಂದೆ.

'ಅದೇ ಸಾರ್ ಗರಿಕೆ ಉಲ್ಲು. ಮೂರು ಎಸಳಿಗೆ ಅದು ತ್ರಿಶೂಲದ ಆಕಾರ ದೇವರಿಗೆ ಪ್ರಿಯವಾದದ್ದು. ಅದು ತಂದೆ. ಹಾಗೇ ಈ ಪಾರಿನ್ ಊವು ಎಲೇನೂ ತಂದೆ...' ಅಂದ.

'ಇದು ಯಾಕ್ರೀ?' ಅಂತ ಕೇಳಿದೆ.

'ಮನೇಲೂ ದೇವ್ರು ಐತೆ ಸಾರ್. ಅಲ್ಲೂ ಪೂಜೆ ಮಾಡ್ಬೇಕಲ್ಲ...' ಅಂದ!

'ಮನೇಲಿ ಇದೆಲ್ಲಾ ಈತರ ಕತ್ತರಿಸುಕ್ಕೆ ಹೂವು ಕಟ್ಟಲಿಕ್ಕೆ ಟೈಂ ಇರುತ್ತೇನ್ರೀ?' ಅಂದೆ. ಮನೇಲಿ ಈತ ಸೀರೆ ಲಂಗದ ವ್ಯಾಪಾರ ನಡೆಸೋದು ತಿಳಿದಿತ್ತು.

'ಇಲ್ಲ ಸಾರ್ ಕತ್ತರಿಸೋದು ಊವ ಕಟ್ಟೋದು ಇಲ್ಲೇ ಮಾಡ್ಕೊಂಡು ಮನೆಗೆ ಓಗ್ತೀನಿ. ಇವತ್ತು ಒಸದಲ್ಲವಾ ಲೇಟಾಯ್ತು. ನಾಳೆಯಿಂದ ಅದನ್ನೆಲ್ಲಾ ಇಲ್ಲೇ ಮಾಡ್ಕೋತೀನಿ...' ಅಂದ!

ಹಿಂದಿನ ಸೆಕ್ಷನ್‌ನಿಂದ ಇವನನ್ನ ಯಾಕೆ ಓಡಿಸಿದಾರೆ ಅಂತ ಆಗ ಅರ್ಥ ಆಯಿತು. ಪ್ರತಿದಿನ ಈ ಮನುಷ್ಯ ಹೀಗೇ ಮಾಡ್ತಾ ಇದ್ದರೆ ಫ್ಯಾಕ್ಟರಿ ಎಷ್ಟು ದಿನದಲ್ಲಿ ಮುಚ್ಚಬೇಕಾಗಬಹುದು ಅಂತ ಲೆಕ್ಕ ಹಾಕಿದೆ. ಇವನ ತರಹವೇ ಹತ್ತು ಜನ ಇದ್ದರೆ ದೇಶದ ಗತಿ ಏನು ಎಂದು ಊಹಿಸಿ ಮೈ ನಡುಗಿತು.

ನೇರ ಬಾಸ್ ಹತ್ತಿರ ಓಡಿದೆ. 'ಸಾರ್ ಇವತ್ತು ಹೀಗಾಯಿತು...' ಅಂತ ಪೂಜೆ ಕತೆ ಹೇಳಿದೆ. ಬಾಸ್ ನನ್ನ ವಿವರ ಕೇಳ್ತಾ 'ಓ, ಹಾಗೇನ್ರೀ, ಹೌದೇನ್ರೀ? ಇದೆಲ್ಲಾ ನಿಜವೇನ್ರೀ?...' ಮೊದಲಾದ ವಿಶೇಷಣಗಳೊಂದಿಗೆ ಆಗಾಗ್ಗೆ ಹಲ್ಲು ಕಿಸಿಯುತ್ತಾ, ಮೂಗು ಉಜ್ಜುತ್ತಾ, ನಕ್ಕು ನಕ್ಕು ಕೆಮ್ಮುತ್ತಾ ನನ್ನ ಕತೆಯನ್ನ 'ಎಂಜಾಯ್' ಮಾಡಿದ.

'ಪಾಪ ಹಿ ಈಸ್ ಎ ಪೂರ್ ಫೆಲೋ' ಹೇಗಾದರೂ ಸ್ವಲ್ಪ ದಿವಸ ಅಡ್ಜಸ್ಟ್ ಮಾಡಿಕೊಳ್ಳಿ... ಅಂದ.

'ಆಮೇಲೆ ಏನು ಮಾಡ್ತೀರಿ - ಸ್ವಲ್ಪ ದಿವಸದ ನಂತರ?' ಅಂತ ಕೇಳಿದೆ, ಬೇರೆ ಇನ್ಯಾರದಾದರೂ ತಲೇಗೆ ಈ ಶನಿ ರವಾನೆ ಆಗಬಹುದೇನೋ ಅಂದುಕೊಂಡು.

'ಮಾಡೋದೇನ್ರೀ? ನೀವು ಅಡ್ಜಸ್ಟ್ ಆಗಿರ್ರೀರಿ...' ಅಂದ! 'ಹುಲ್ಲು ಹೇಗೆ ಕತ್ತರಿಸಿದ ಇನ್ನೊಂದು ಸಲ ಹೇಳ್ರೀ. ಮೈವೈಫ್ ವಿಲ್ ಎಂಜಾಯ್ ದಿ ಸ್ಟೋರಿ...' ಅಂತ ಮತ್ತೆ ಕತೆ ಹೇಳಿಸಿಕೊಂಡ.

ಮಾರನೇ ದಿವಸ ಹಿಂದಿನ ದಿವಸದ ಕತೆ ಪುನರಾವರ್ತನೆಯಾಗುವ ಮೊದಲು ಮತ್ತೆ ಸ್ವಲ್ಪ ಅಡಿಷನಲ್ ಕೆಲಸ ನಡೆಯಿತು. ಅದೆಂದರೆ ಕೆಲಸಕ್ಕೆ ಆತ ಬಂದ ಕೂಡಲೇ ಷೂ ಬಿಚ್ಚಿದ, ಸಾಕ್ಸ್ ಬಿಚ್ಚಿದ. ಆರು ಡಬ್ಬಗಳನ್ನು ಒಂದರೊಳಗೊಂದು ಇರಿಸಿದ್ದು ತೆಗೆದ ಅದರಿಂದ ಸೋಪು ತೆಗೆದುಕೊಂಡ. ವಾಷ್‌ಬೇಸಿನ್ ಹತ್ತಿರ ಹತ್ತು ನಿಮಿಷ ನಿಂತು ಕಾಲು ಕೈ ಮುಖ ಮೂತಿ ತೊಳೆದ. ಸೆಕ್ಷನ್ನಿಗೆ ಬಂದು ಸೋಪು ಸ್ವಸ್ಥಾನದಲ್ಲಿ ಇರಿಸಿದ - ಆರು ಡಬ್ಬಗಳನ್ನೂ ಒಂದರೊಳಗೊಂದು ಸೇರಿಸಿದ. ಮತ್ತೆ ಐದು ಡಬ್ಬಗಳನ್ನ ತೆರೆದು ಚಿಕ್ಕ ಟವಲ್ಲು ಆಚೆ ತೆಗೆದ. ಅದರಿಂದ ಕೈ ಮುಖ ಒರೆಸಿದ. ಕಾಲು ಒರೆಸಲು ಬೇರೆ ಟವಲ್ಲು ತೆಗೆದ. ಮುಖ ಒರೆಸುವ ಟವಲ್ಲಿನಿಂದ ಕಾಲು ಒರೆಸಿದರೆ ಮಡಿಗೆ ಬರುಲ್ಲ ಸಾರ್ ಅಂದ. ಕಾಲು ಒರೆಸಿದ. ನಂತರ ಫೋಟೋ ಹಾಕಿರದಿದ್ದ ಗೋಡೆಗೆ ಎರಡು ಮೊಳೆಗಳನ್ನ ಕೊಂಚ ದೂರ ದೂರ ಹೊಡೆದು ಅದಕ್ಕೊಂದು ಹಗ್ಗ ಬಿಗಿದ. ನೈಲಾನ್ ಹಗ್ಗ ಬಿಗಿದದ್ದು - ಇದೂ ಸಹ ಮಡಿಗೆ ಬರುತ್ತಂತೆ. ಎರಡೂ ಟವಲ್‌ಗಳನ್ನ ಅದರ ಮೇಲೆ ನೇತು ಹಾಕಿದ. ಚಿಕ್ಕ ಸ್ಟೂಲು ದೊಡ್ಡ ಸ್ಟೂಲು ಪಕ್ಕ ಪಕ್ಕದಲ್ಲಿ ಇರಿಸಿದ. ಚಿಕ್ಕದರ ಮೇಲೆ ಹತ್ತಿ ಅದರಿಂದ ದೊಡ್ಡ ಸ್ಟೂಲು ತಂದ. ಒಣಗಿದ ನವಿಲುಗರಿ ಆಕಾರದ ಗರಿಕೆ ಹುಲ್ಲು, ಗಿಡದ ಎಲೆಗಳು ಮತ್ತು ಹೂಗಳನ್ನ ತೆಗೆದ. ಎಲ್ಲವನ್ನೂ ಒಂದು ಕಾರ್ಟನ್ ಬಾಕ್ಸ್‌ನಲ್ಲಿ ಹಾಕಿ ಅದನ್ನ ತೆಗೆದುಕೊಂಡು ಹೋಗಿ ಒಂದು ಮರದ ಕೆಳಗೆ ಹಾಕಿ ಬಂದ. ಕಾಫಿ ಮುಗಿಸಿದ. ಮೂರೂ ಕ್ಯಾರಿಯರ್‌ಗಳನ್ನ ತೆಗೆದುಕೊಂಡು ಹುಲ್ಲು ಹೂವು ಸೊಪ್ಪು ತರಲು ಹೊರಟ! ಮಿಕ್ಕಿದ್ದು ಹಿಂದಿನ ದಿನದ ಹಾಗೇ. ಮನೆಗೆ ಹೋಗುವ ಮುನ್ನ ಹೂ ಕಟ್ಟಿದ, ಹುಲ್ಲು ಜೋಡಿಸಿದ, ಸೊಪ್ಪು ಪೋಣಿಸಿ ಹಾರ ಮಾಡಿದ.

ಪ್ರತಿ ದಿವಸ ಇದೇ ಈತನ ಈ ವ್ಯವಹಾರ ನೋಡಿ ನೋಡಿ ಹುಚ್ಚು ಹಿಡಿಯುತ್ತೆ ಅನಿಸಿತು. ಇದೊಂದೇ ಈತನ ವೀಕ್‌ನೆಸ್ ಆಗಿದ್ದರೆ ಹೇಗೋ ಸಹಿಸಿಕೊಳ್ಳಬಹುದು ಅನಿಸಿದ್ದು ನಿಕಟವಾಗುತ್ತಾ ಬಂದ ಹಾಗೆ. 'ಪಂಚಭೂತಗಳು ಅಂದರೇನು ಸಾರ್?' 'ಪಂಚವೃಕ್ಷಗಳು ಅಂದರೇನು ಸಾರ್?' 'ಬನ್ನಿ ಮರಕ್ಕೆ ಪೂಜೆ ಮಾಡಿದರೆ ಮಕ್ಕಳು ಆಗುತ್ತಲ್ಲಾ ಬನ್ನಿ ಮರಕ್ಕೆ ಅಂತಹ ವಿಶೇಷ ಏನಿದೆ

ಸಾರ್?' 'ಹಿಂದಿನ ಕಾಲದಲ್ಲಿ ಮಂತ್ರ ಹೇಳೇನೇ ಮಕ್ಕಳಾಗುತ್ತಿತ್ತು ಯಾಕೆ ಗೊತ್ತಾ ಸಾರ್?' ಮೊದಲಾದ ಪ್ರಶ್ನೆಗಳು! ನನಗೆ ಉತ್ತರವೇ ತಿಳಿಯದ ಸಾವಿರಾರು ಪ್ರಶ್ನೆಗಳು!

ನೂರಕ್ಕೆ ನೂರರಷ್ಟು ಹುಚ್ಚು ಹತ್ತುವ ಮೊದಲು ಇವನಿಂದ ತಪ್ಪಿಸಿಕೊಂಡದ್ದೇ ಬೇರೆ ಕತೆ. ಆದರೆ ಈತ ನನ್ನ ಸಹೋದ್ಯೋಗಿಯಾಗಿದ್ದಷ್ಟು ದಿನಗಳಂತೂ ಬೆರಗಿನಿಂದ ಹೊರ ಪ್ರಪಂಚ ನೋಡುವುದು ಸಾಧ್ಯವಾಯಿತು. ಅಲ್ಲದೇ ಈತನನ್ನು ಹುಡುಕಿ ಬರುತ್ತಿದ್ದ ಈತನ ತರಹದವರೇ ಆದ ಗೆಳೆಯರನ್ನೂ ನೋಡಲು ಸಾಧ್ಯವಾಯಿತು. ಅಮಾವಾಸ್ಯೆ ಮೇಲೆ ಚತುರ್ದಶಿ ಬಂದರೆ ಏನು ಮಾಡಬೇಕು ಎಂಬಂತಹ ಸಹನವಾದ ಸಮಸ್ಯೆಗಳಿಂದ ಹಿಡಿದು ಕರಗದ ದಿವಸ ಕಡ್ಲೇಕಾಯಿ ತಿನ್ನಬಹುದೇ ಎಂಬಂತಹ ಮತ್ತೂ ಗಹನವಾದ ಸಮಸ್ಯೆಗಳ ಇತ್ಯರ್ಥಕ್ಕೆ ಜನ ಈತನ ಬಳಿ ಬರುತ್ತಿದ್ದರು. ಈತ ಗನವಾಗಿ ಚಿಂತಿಸಿ ಕರಗದ ದಿವಸ ಕಡಲೆಕಾಯಿ ಸಂಗಡ ಸಕ್ಕರೆ ಸೇರಿಸಿ ತಿಂದರೆ ದೋಷ ಇರದು ಎಂದು ಹೇಳಿದ್ದನ್ನೂ ಕೇಳಿದ್ದೇನೆ.

ಪೂಜೆ ವಿವರಿಸಲು ಹೋಗಿ ಎಲ್ಲಿಂದ ಎಲ್ಲಿಗೆ ಹೋದೆ ನೋಡಿ. ಹಾಗೆ ನೋಡಿದರೆ ಪೂಜೆಯ ಫಲವೇ ಹಾಗಂತೆ. ಏನೋ ಮಾಡಲು ಹೋಗಿ ಅದೇನೋ ಆಗುತ್ತದಂತೆ. ವೈವಿಧ್ಯಮಯತೆ ಜೀವನದ ಗುಟ್ಟು ಅಂತ ಒಂದು ಹೇಳಿಕೆ ಇದೆಯಂತೆ. ವೈವಿಧ್ಯವನ್ನೇ ಒಂದು ರೀತಿ ಲಕ್ಷಣ ಅಂತ ಅಂದುಕೊಂಡಿರುವವರು ವಿಲಕ್ಷಣರಾಗಿರುತ್ತಾರೆ ಎಂದೂ ಹೇಳುತ್ತಾರೆ. ಹಾಗೆ ನೋಡಿದರೆ ನಮ್ಮಲ್ಲಿನ ವಿಲಕ್ಷಣತೆ ನಮಗೆ ತೋರದು, ಬೇರೆಯವರ ವಿಲಕ್ಷಣತೆ ನಮಗೆ ತೋರುತ್ತೆ. ಬಹುಶಃ ಅದರಿಂದಲೇ ಗುಲಗಂಜಿಗೆ ತನ್ನ ಕಪ್ಪು ಕಾಣದು ಎಂಬ ಮಾತು ಹುಟ್ಟಿರಬಹುದೇ?

ಪೂಜೆಗಾಗಿ ಎಂದು ಪಕ್ಕದ ರಸ್ತೆಯ ಮನೆಗಳ ಹೂಗಳನ್ನು ಬೆಳಗಿನ ಜಾವದ ಹೊತ್ತೆ ಕದಿಯುವ ಜನರನ್ನು ನೀವು ಕಂಡಿರಬಹುದು, ಚಂದಾ ವಸೂಲಿ ಮಾಡಿ ದೇವರನ್ನು ಪೂಜಿಸುವ ಜನ ನಿಮಗೆ ಗೊತ್ತಿರಬಹುದು, ದೇವರ ಹೆಸರು ಹೇಳಿ ಅದೇನೇನೋ ಗಳಿಸಿದವರೂ ನಿಮಗೆ ಗೊತ್ತಿರಬಹುದು! ಆದರೆ ಪೂಜೆ ಸಲ್ಲಿಸುವ ಸಲುವಾಗಿ ಫ್ಯಾಕ್ಟರಿಯಲ್ಲಿ ಒಂದು ಅಗಸೇ ಗಿಡ ಬೆಳೆಸಿ ಅದನ್ನು ಕಾದುಕೊಂಡು ಬಂದ ಮಿತ್ರರು ನಿಮಗಿಲ್ಲ ಎಂದು ನನಗೆ ಗೊತ್ತು! ನನಗೆ ಅಂತಹ ಗೆಳೆಯ ಸಹ ಇದ್ದಾನೆ. ಒಟ್ಟಿನಲ್ಲಿ ಇವೆಲ್ಲವೂ ನಮ್ಮ ಹಿರಿಯರ 'ಪೂಜಾಫಲ'!

ರಾಮಚಂದ್ರ ಕಳಿಸಿದ ಕಥೆ

- ಶಿವು

ನನ್ನ ಹಳೆಯ ಹಾಗೂ ಹಿರಿಯ ಮಿತ್ರ ರಾಮಚಂದ್ರ ಮೊನ್ನೆ ನನಗೊಂದು ಈಮೇಯ್ಲ್ ಕಳಿಸಿದ್ದರು. ಅದರಲ್ಲಿ ಅವರು ''ಇಗೋ ಇದರೊಂದಿಗೊಂದು ಕಥೆ. ನನ್ನ ಮಗಳು ನನಗೆ ಇದನ್ನ ಕಳಿಸಿದ್ದಳು. ಅಪರಂಜಿಗೆ ಒಗ್ಗಬಹುದೇನೋ ನೋಡಿ'' ಅಂತ ಬರೆದಿದ್ದರು. ಕಥೆ ಓದಿದೆ. ಅದರ ಕುರಿತು ನನ್ನ ಪ್ರತಿಕ್ರಿಯೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ಮುಂಚೆ ಕಥೆಯನ್ನು ನಿಮಗೆ ಯಥಾವತ್ತಾಗಿ ತಿಳಿಸುವುದು ಆಗತ್ಯ. ಹಾಗಾಗಿ ಮೊದಲಿಗೆ ಕಥೆ ಓದಿ.

ಕಥೆ: ಆ ಬ್ರಿಟಿಷ್ ಏರ್‌ವೇಸ್ ಫ್ಲೈಟ್ ಜೊಹಾನ್ಸ್‌ಬರ್ಗ್‌ನಿಂದ ಹೊರಟಿತ್ತು. ಮಧ್ಯ ವಯಸ್ಸಿನ ಬಿಳಿಯ ಸೌತ್ ಆಫ್ರಿಕನ್ ಶ್ರೀಮಂತ ಮಹಿಳೆಯೊಬ್ಬಳು ತನ್ನ ಪಕ್ಕದಲ್ಲಿ ಕುಳಿತಿದ್ದ ಕಪ್ಪು ಮನುಷ್ಯನನ್ನು ಕಂಡು, ಕೋಪದಿಂದ ಕ್ಯಾಬಿನ್ ಸಹಾಯಕಿಯನ್ನು ಕರೆಯುತ್ತಾಳೆ ಸಹಾಯಕಿ ಅವಳ ಬಳಿ ಸಾಗಿ ''ಏನಾಗಬೇಕಿತ್ತು ಮೇಡಮ್?'' ಎಂದು ವಿನಯದಿಂದ ಕೇಳುತ್ತಾಳೆ.

''ಕಾಣಿಸುಲ್ವೇ. ಈ ಕಾಫಿರ್ ಪಕ್ಕದಲ್ಲಿ ನನಗೆ ಸೀಟ್ ಕೊಟ್ಟಿದೀರಲ್ಲಾ. ಖಂಡಿತ ನಾನು ಇಲ್ಲಿ ಕುಳ್ಳಿರಲಾರೆ. ಬೇಗ ಬೇರೊಂದು ಸೀಟಿನ ವ್ಯವಸ್ಥೆ ಮಾಡಿ'' ಎನ್ನುತ್ತಾಳೆ ಆ ಬಿಳಿಯ ಮಹಿಳೆ.

''ಕೋಪಿಸಬೇಡಿ. ಶಾಂತರಾಗಿ. ಇವತ್ತು ನಮ್ಮ ಫ್ಲೈಟ್ ಎಂದಿಗಿಂತ ಹೆಚ್ಚು ತುಂಬಿದೆ. ಆದರೂ ನಾನು ಹೋಗಿ ಸ್ವಲ್ಪ ಪರಿಶೀಲಿಸಿ ಬರುವೆ. ಎಕಾನಮಿ ಕ್ಲಾಸ್ ತುಂಬಿದ್ದರೂ, ಕ್ಲಬ್ ಅಥವಾ ಫಸ್ಟ್ ಕ್ಲಾಸಿನಲ್ಲಿ ಜಾಗ ಸಿಗಬಹುದೇನೋ ನೋಡುತ್ತೇನೆ. ಅಲ್ಲಿನವರೆಗೂ ನಮ್ಮೊಂದಿಗೆ ಸಹಕರಿಸಿ'' ಎನ್ನುತ್ತಾ ಸಹಾಯಕಿ ನಿರ್ಗಮಿಸುತ್ತಾಳೆ.

ಶ್ರೀಮಂತ ಮಹಿಳೆ ತನ್ನ ಸುತ್ತಲೂ ಒಂದು ಜಂಭದ ನೋಟವನ್ನು ಬೀರಿ, ಸಹಾಯಕಿಯ ಬರವಿಗಾಗಿ ಕಾಯುತ್ತಾಳೆ.

ಹಲವು ನಿಮಿಷಗಳ ನಂತರ ಸಹಾಯಕಿ ಒಳ್ಳೆಯ ಸುದ್ದಿಯೊಡನೆ ಬಂದುದನ್ನು ಕಂಡು ಮಹಿಳೆ ಬೀಗುತ್ತಾಳೆ.

''ಮ್ಯಾಡಮ್, ನಾನೆಂದುಕೊಂಡ ಹಾಗೆಯೇ ಎಕಾನಮಿ ಕ್ಲಾಸಿನಲ್ಲಿ ಖಾಲಿ ಸೀಟೇ ಇಲ್ಲ, ಕ್ಲಬ್‌ನಲ್ಲೂ ಅಷ್ಟೇ. ಫಸ್ಟ್ ಕ್ಲಾಸಿನಲ್ಲಿ ಮಾತ್ರ ಒಂದೇ ಒಂದು ಸೀಟ್ ಖಾಲಿ ಇದೆ. ಎಕಾನಮಿ ಕ್ಲಾಸಿನಿಂದ ಈ ರೀತಿ ಫಸ್ಟ್ ಕ್ಲಾಸಿಗೆ ಸೀಟ್ ಬದಲಿಸುವುದು


ತೀರ ಅಪರೂಪ. ಆದರೆ ಇಲ್ಲಿನ ವಿಶೇಷ ಪರಿಸ್ಥಿತಿಯನ್ನು ಗಮನಿಸಿ, ತೀರ ಕೀಳು ವರ್ಗದ ಜನರೊಂದಿಗೆ ಕುಳಿತುಕೊಳ್ಳುವುದನ್ನು ತಪ್ಪಿಸಲು ನಮ್ಮ ಕ್ಯಾಪ್ಟನ್ ಈ ಬದಲಾವಣೆಗೆ ಅನುಮತಿ ಕೊಟ್ಟಿದ್ದಾರೆ'' ಎಂದು ಹೇಳಿ, ಸಹಾಯಕಿ ಕಪ್ಪು ಮನುಷ್ಯನತ್ತ ತಿರುಗಿ.

''ಮಹನೀಯರೇ, ತಾವು ಸಿದ್ಧರಾದ ತಕ್ಷಣ ತಮ್ಮನ್ನು ತಮ್ಮ ಹೊಸ ಸೀಟಿಗೆ ಕರೆದೊಯ್ಯುವೆ'' ಎನ್ನುತ್ತಾಳೆ.

ಕಪ್ಪು ಮನುಷ್ಯ ನಿಧಾನವಾಗಿ ಎದ್ದು ತನ್ನ ಹೊಸ ಜಾಗಕ್ಕೆ ತೆರಳುತ್ತಿರುವಂತೆ, ಸುತ್ತಲಿನ ಪ್ರಯಾಣಿಕರೆಲ್ಲಾ ಒಮ್ಮೆಲೇ ಎದ್ದುನಿಂತು ಕರತಾಡನ ಮಾಡಿ ತಮ್ಮ ಹರ್ಷ ಸೂಚಿಸುತ್ತಾರೆ.

ಇಷ್ಟೇ ನೋಡಿ ಕಥೆ.


ನನಗಂತೂ ಈ ಕಥೆಯನ್ನು ಓದಿದ ತಕ್ಷಣ ಸಿಕ್ಕಾಪಟ್ಟೆ ರೇಗಿತು. "The very condescending tenor of the tale', "White man's justice' ಎಂಬೆಲ್ಲಾ ಪದಸಮುಚ್ಚಯಗಳು ತಲೆಯಲ್ಲಿ ಹಾರಾಡಿದವು. ಅಲ್ಲಾ ಸ್ವಾಮಿ, ಯಾವುದೇ ವಿಮಾನ ಸಾಗರೋತ್ತರ ಯಾನ ಮಾಡುವಾಗ ಆ ವಿಮಾನ ಸಂಸ್ಥೆಯು ನೋಂದಾಯಿತವಾಗಿರುವ ದೇಶದ ನ್ಯಾಯ ಸಂಹಿತೆಗೆ ಒಳಪಟ್ಟಿರುವುದು ಎಲ್ಲರಿಗೂ ತಿಳಿದ ವಿಷಯ. ಬ್ರಿಟಿಷ್ ಏರ್‌ವೇಸ್ ಫ್ಲೈಟ್ ಆದ್ದರಿಂದ ಬ್ರಿಟನ್ನಿನ ಕಾನೂನಿನಗೆ ಆ ವಿಮಾನ ಒಳಪಡಬೇಕು. ಬ್ರಿಟನ್ನಿನ ಕಾಯಿದೆ ಪ್ರಕಾರ, ಆ ದೇಶದಲ್ಲಿ ಯಾವುದೇ ಪೌರ ವರ್ಣಭೇದಸೂಚಕವಾದ ನಡವಳಿಕೆಯನ್ನು ಪ್ರದರ್ಶಿಸಿದರೆ, ಆತ ಅಥವಾ ಆಕೆಯನ್ನು ಅಲ್ಲಿಯೇ ದಸ್ತಗಿರಿ ಮಾಡಿ, ವಿಮಾನ ಬ್ರಿಟನ್ನನ್ನು ತಲುಪಿದ ತಕ್ಷಣ ತಪ್ಪಿತಸ್ಥಳನ್ನು ಪೋಲೀಸರಿಗೆ ಒಪ್ಪಿಸುವುದು ವಿಮಾನ ಸಿಬ್ಬಂದಿಯ ನಾಗರಿಕ ಕರ್ತವ್ಯ. ಆ ಸಹಾಯಕಿ ಮತ್ತು ಅವಳ ಕ್ಯಾಪ್ಟನ್ ತಮ್ಮ ಕರ್ತವ್ಯವನ್ನು ಪಾಲಿಸುವುದನ್ನು ಬಿಟ್ಟು, ತಮ್ಮ ಬಣ್ಣದವಳೇ ಆದ ಆ ಮಹಿಳೆಯನ್ನು ರಕ್ಷಿಸುವುದಕ್ಕೋಸ್ಕರ ಈ ಆಟ ಆಡಿದರು ಅನಿಸಿತು ನನಗೆ. ಆ ಕಪ್ಪು ಮನುಷ್ಯ ಕುರಿಯಂತೆ ಜಾಗ ಬದಲಿಸುವ ಬದಲು, ತನ್ನ ನಾಗರಿಕ ಹಕ್ಕುಗಳನ್ನು ಪ್ರದರ್ಶಿಸಿ, ಆಕೆಯನ್ನು ದಸ್ತಗಿರಿ ಮಾಡುವಂತೆ ಒತ್ತಾಯಿಸಿ, ವಿಮಾನ ಬ್ರಿಟನ್ನಿನಲ್ಲಿ ಇಳಿಯುವವರೆಗೂ ಆಕೆಯನ್ನು ಫಸ್ಟ್ ಕ್ಲಾಸಿನ ಸೀಟಿನಲ್ಲಿ ಬಂಧಿಸಿಡುವಂತೆ ಆಗ್ರಹ ಪಡಿಸಿದ್ದರೆ, ಮತ್ತು ಸಹಾಯಕಿ ಆ ಒತ್ತಾಯದಂತೆ ನಡೆದುಕೊಂಡಿದ್ದರೆ, ಸುತ್ತಲಿನ ಪ್ರಯಾಣಿಕರ ಕರತಾಡನಕ್ಕೆ ಒಂದು ಬೆಲೆ ಇರುತ್ತಿತ್ತು. ನಾನು ಸಣ್ಣ ವಿಷಯಕ್ಕೆಲ್ಲಾ ಸುಮ್ಮನೆ over react ಮಾಡುತ್ತಿದ್ದೇನೋ, ಅಥವಾ ಅದರಲ್ಲೇನಾದರೂ ಹುರುಳಿದೆಯೋ ನೀವೇ ಹೇಳಿ. ನಿಜಕ್ಕೂ ಇದೊಂದು ಸ್ವಾರಸ್ಯಮಯ ಚರ್ಚೆ ಆಗಬಲ್ಲುದು.


STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Mallige Medical Centre

31/32, Crescent Road, Bangalore 560 001.
Phone: 2203333



Mahabodhi Mallige Hospital

T. Mariappa Road, Siddapura,
Jayanagar, Bangalore 560 011.
Phone: 6565678

Fax: 91-80-2265298 E-mail: info@mallige.com
Web: http://www.mallige.com

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR